ನಿಮ್ಮೂರು ಸುದ್ದಿ

ಕನ್ನಡ ದಿನ ಪತ್ರಿಕೆ NIMMURU SUDDI

ಸಂಪಾದಕರು: ಸುಂದರ್ Editor : Sundar

ಏಕ ಕಾಲಕ್ಕೆ ಬಳ್ಳಾರಿ, ಕೊಪ್ಪಳ, ಯಾದಗಿರಿ, ರಾಯಚೂರು, ಕಲಬುರ್ಗಿ, ಬೀದರ, ವಿಜಯನಗರ ಜಿಲ್ಲೆಗಳಲ್ಲಿ ಪ್ರಕಟ

Volume: 01, Issue: 161 RNI Number : KNKAN/25/A2770 19-06-2026 Friday Page 04, Price 2/- suddinimmuru@gmail.com Mob:-8660146563

ಸಂಪುಟ :01 ಸಂಚಿಕೆ :161 ರಾಯಚೂರು 19-06-2026 ಶುಕ್ರವಾರ ಪುಟ 04 ಬೆಲೆ ರೂ.2/- ಮೊ:8660146563

ವಿಧಾನ ಪರಿಷತ್ ಚುನಾವಣೆ : ಕಾಂಗ್ರೆಸ್‌ಗೆ 5 ಸ್ಥಾನ, ಬಿಜೆಪಿಗೆ 2 ಸ್ಥಾನ; ಜೆಡಿಎಸ್‌ಗೆ ಸೋಲು

ಬೆಂಗಳೂರು: ವಿಧಾನಸಭೆಯಿಂದ ವಿಧಾನಪರಿಷತ್‌ಗಾಗಿ ಇಂದು ನಡೆದ 7 ಸ್ಥಾನಗಳ ಚುನಾವಣೆಯ ಫಲಿತಾಂಶ ಘೋಷಣೆಯಾಗಿದೆ. ನಿರೀಕ್ಷೆಯಂತೆ ಕಾಂಗ್ರೆಸ್‌ನ 5, ಬಿಜೆಪಿಯ 2 ಅಭ್ಯರ್ಥಿಗಳು ಗೆಲುವು ಸಾಧಿಸಿದ್ದು, ಜೆಡಿಎಸ್ ಅಭ್ಯರ್ಥಿ ಸೋಲು ಕಂಡಿದ್ದಾರೆ.

ವಿಧಾನ ಪರಿಷತ್ ಚುನಾವಣೆ ಫಲಿತಾಂಶ ಪ್ರಕಟವಾಗಿದ್ದು, ಕಾಂಗ್ರೆಸ್‌ನ ಐದು ಅಭ್ಯರ್ಥಿಗಳಾದ ಬಿ.ಕೆ.ಹರಿಪ್ರಸಾದ್, ತಿಪ್ಪಣ್ಣಪ್ಪ ಕಮಕನೂರು, ಪಿ.ವಿ.ಮೋಹನ್, ಶಿವಣ್ಣ ಬಿ.ಎಸ್., ವಿನಯ್ ಕಾರ್ತಿಕ್ ಗೆಲುವು ಸಾಧಿಸಿದ್ದಾರೆ. ಬಿಜೆಪಿ ಪಕ್ಷದಿಂದ ರಘು ಕೌಟಿಲ್ಯ ಹಾಗೂ ಲಿಂಗರಾಜ ಪಾಟೀಲ್ ಗೆಲುವು ಸಾಧಿಸಿದ್ದಾರೆ. ಇನ್ನು ಜೆಡಿಎಸ್ ಪಕ್ಷ ಗೋವಿಂದ ರಾಜು ಸೋಲು ಕಂಡಿದ್ದಾರೆ.

ಕರ್ನಾಟಕ ವಿಧಾನ ಪರಿಷತ್ತಿನ ಏಳು ಸ್ಥಾನಗಳಿಗೆ ನಡೆದ ದ್ವೈವಾರ್ಷಿಕ ಚುನಾವಣೆಯ ಸಂದರ್ಭದಲ್ಲಿ ಬಿಜೆಪಿ ಎಂಎಲ್‌ಸಿ ಅಭ್ಯರ್ಥಿಗಳಾದ ಲಿಂಗರಾಜ್ ಪಾಟೀಲ್ ಮತ್ತು ರಘು ಕೌಟಿಲ್ಯ ಅವರನ್ನು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಮತ್ತು ಪಕ್ಷದ ಶಾಸಕರು ವಿಧಾನಸೌಧದಲ್ಲಿ ಸ್ವಾಗತಿಸಿದರು. ()

ಬಿಜೆಪಿ, ಜೆಡಿಎಸ್‌ಗೆ ಅಡ್ಡಮತದಾನದ ಆಘಾತ: ಚುನಾವಣೆಯಲ್ಲಿ ಬಿಜೆಪಿಗೆ ಹಾಗೂ ಜೆಡಿಎಸ್‌ಗೆ ಅಡ್ಡಮತದಾನದ ಆಘಾತ ಎದುರಾಗಿದೆ. ಬಿಜೆಪಿಯಿಂದ 3 ಅಡ್ಡಮತದಾನ ನಡೆದರೆ, ಜೆಡಿಎಸ್‌ನಿಂದ 4 ಅಡ್ಡಮತದಾನ ನಡೆದಿದೆ. ಆ ಮೂಲಕ ಕಾಂಗ್ರೆಸ್ ಅಭ್ಯರ್ಥಿಗಳ ಪರ ಒಟ್ಟು 7 ಅಡ್ಡ ಮತದಾನ ಆಗಿವೆ.

ಜೆಡಿಎಸ್ ಅಭ್ಯರ್ಥಿ ಗೋವಿಂದ ರಾಜುಗೆ 14 ಮತಗಳು ಬಿದ್ದು, ಸೋಲು ಅನುಭವಿಸಿದ್ದಾರೆ. ಅಚ್ಚರಿ ಎಂಬಂತೆ ಅಡ್ಡಮತದನಾದ ಫಲಶೃತಿಯಾಗಿ ಕಾಂಗ್ರೆಸ್ ಐದನೇ ಅಭ್ಯರ್ಥಿ ವಿನಯ್ ಕಾರ್ತಿಕ್‌ಗೆ 32 ಮತಗಳು ಬೀಳುವ ಮೂಲಕ ಭರ್ಜರಿ ಗೆಲುವು ಸಾಧಿಸಿದ್ದಾರೆ.

ಬಿಜೆಪಿಯ ಇಬ್ಬರು ಅಭ್ಯರ್ಥಿಗಳಿಗೆ ತಲಾ 30 ಮತಗಳನ್ನು ಹಾಕಲು ಬಿಜೆಪಿ ಶಾಸಕರಿಗೆ ಸೂಚನೆ ನೀಡಲಾಗಿತ್ತು. ಆದರೆ, ರಘು ಕೌಟಿಲ್ಯಗೆ ಒಟ್ಟು 29 ಸಿಂಧು ಮತಗಳು ಬಿದ್ದಿದ್ದು, ಅವರಿಗೆ ಬಿದ್ದ 1 ಮತ ಅಸಿಂಧುವಾಗಿದೆ. ಇತ್ತ ಬಿಜೆಪಿ ಅಭ್ಯರ್ಥಿ ಲಿಂಗರಾಜ್ ಪಾಟೀಲ್ ಅವರಿಗೆ 27 ಮೊದಲ ಪ್ರಾಶಸ್ತ್ಯದ ಮತಗಳು ಬಿದ್ದಿವೆ. ಅವರಿಗೆ ಬೀಳಬೇಕಿದ್ದ 30 ಮತಗಳ ಪೈಕಿ 3 ಮತಗಳು ಅಡ್ಡಮತದಾನವಾಗಿದೆ.

ಕಾಂಗ್ರೆಸ್ ಅಭ್ಯರ್ಥಿಗಳಿಗೆ ಬಿದ್ದ ಮತ ಎಷ್ಟು?:

ಬಿ.ಕೆ. ಹರಿಪ್ರಸಾದ್ - 30

ಪಿ.ವಿ. ಮೋಹನ್ - 29



ಬಿ.ಎಸ್. ಶಿವಣ್ಣ - 30

ತಿಪ್ಪಣಪ್ಪ ಕಮಕನೂರ - 30

ವಿನಯ್ ಕಾರ್ತಿಕ್ - 32

ಬಿಜೆಪಿ ಅಭ್ಯರ್ಥಿಗಳಿಗೆ ಬಿದ್ದ ಮತ ಎಷ್ಟು?:

ರಘು ಕೌಟಿಲ್ಯ - 29

ಲಿಂಗರಾಜ ಪಾಟೀಲ್ - 27

ಜೆಡಿಎಸ್ ಅಭ್ಯರ್ಥಿಗೆ ಬಿದ್ದ ಮತ ಎಷ್ಟು?:

ಗೋವಿಂದರಾಜು -14



ಮೊಹರಂ ಹಬ್ಬದ ಜಿಲ್ಲಾ ಮಟ್ಟದ ಶಾಂತಿ ಪಾಲನಾ ಸಭೆ

ಮೊಹರಂ ಹಬ್ಬವನ್ನು ಶಾಂತಿ, ಸೌಹಾರ್ದದಿಂದ ಆಚರಿಸಿ: ಜಿಲ್ಲಾಧಿಕಾರಿ ಪೂವಿತಾ

ರಾಯಚೂರು ಜೂ.18

ಭಾವೈಕ್ಯದ ಪ್ರತೀಕವಾದ ಮೊಹರಂ ಹಬ್ಬವನ್ನು ಜಿಲ್ಲೆಯ ಎಲ್ಲರೂ ಶಾಂತಿ, ಸೌಹಾರ್ದದಿಂದ ಆಚರಿಸಬೇಕೆಂದು ಜಿಲ್ಲಾಧಿಕಾರಿಗಳಾದ ಪೂವಿತಾ ಎಸ್. ಅವರು ಹೇಳಿದರು.

ಜೂನ್ 18ರ ಗುರುವಾರ ದಂದು ನಗರದ ಜಿಲ್ಲಾ ಪೊಲೀಸ್ ಅಧೀಕ್ಷಕರ ಕಚೇರಿಯಲ್ಲಿ ಜಿಲ್ಲಾಡಳಿತ, ಜಿಲ್ಲಾ ಪೊಲೀಸ್ ಇಲಾಖೆಯ ವತಿಯಿಂದ ನಡೆದ ಮೊಹರಂ ಹಬ್ಬದ ಜಿಲ್ಲಾ ಮಟ್ಟದ ಶಾಂತಿ ಪಾಲನಾ ಸಭೆಯಲ್ಲಿ ವಿಡಿಯೋ ಕಾನ್ಫರೇನ್ಸ್ ಮೂಲಕ ಭಾಗವಹಿಸಿ ಅವರು ಮಾತನಾಡಿದರು.

ಮೊಹರಂ ಹಬ್ಬವನ್ನು ಶಾಂತಿಯುತವಾಗಿ ಆಚರಣೆ ಅಗತ್ಯ ಸಿದ್ದತೆಯನ್ನು ಸಂಬಧಿಸಿದ ಇಲಾಖೆಯ ಅಧಿಕಾರಿಗಳು ಮಾಡಿಕೊಳ್ಳಬೇಕು. ಅಲ್ಲದೆ ಜಿಲ್ಲೆಯ ಎಲ್ಲಾ ತಹಶಿಲ್ದಾರರು ಹಾಗೂ ತಾಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳು ಮೊಹರಂ ಆಚರಣೆಯ ಸ್ಥಳಗಳನ್ನು ಪರಿಶೀಲನೆ ಮಾಡಬೇಕು. ಆ ಗ್ರಾಮದ ಮುಖಂಡರೊದಿಗೆ ಸಭೆ ನಡೆಸಬೇಕು. ಅಗ್ನಿ ಅವಘಡಗಳು ನಡೆಯದಂತೆ ಮುಂಜಾಗ್ರತವಾಗಿ ಮೊಹರಂ ಆಚರಣೆಯ ಪ್ರಮುಖ ಸ್ಥಳಗಳಲ್ಲಿ ಅಗ್ನಿ ನಂದಿಸುವ ಸಾಮಾಗ್ರಿಗಳನ್ನು ಇಡಬೇಕು. ಜಿಲ್ಲೆಯಲ್ಲಿ ಯಾವುದೇ ದುರ್ಘಟನೆಗೆ ಅವಕಾಶ ನೀಡದಂತೆ ಎಲ್ಲಾ ಇಲಾಖೆಯ ಅಧಿಕಾರಿಗಳು ಶ್ರಮಿಸಬೇಕು. ಜೆಸ್ಕಾಂ



ಇಲಾಖೆಯಿಂದ ಹಬ್ಬದ ದಿನಗಳಂದು ಕರೆಂಟ್ ಸಮಸ್ಯೆಯಾಗದಂತೆ ನೋಡಿಕೊಳ್ಳಬೇಕು. ಅಗ್ನಿ ಶಾಮಕದಳದ ಇಲಾಖೆಯ ಎಲ್ಲಾ ತಾಲೂಕು ಮಟ್ಟದ ಅಧಿಕಾರಿಗಳೊಂದಿಗೆ ಸಭೆ ಮಾಡಬೇಕು ಎಂದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಅರುಣಾಂಗ್ಶು ಗಿರಿ ಅವರು ಮಾತನಾಡಿ, ರಾಯಚೂರು ಜಿಲ್ಲೆಯಲ್ಲಿ 725 ಒಟ್ಟು ಸ್ಥಳಗಳಲ್ಲಿ ಮೊಹರಂ ದೇವರನ್ನು ಪ್ರತಿಷ್ಠಾಪನೆ ಮಾಡಿ ಸಾರ್ವಜನಿಕವಾಗಿ ಆಚರಿಸುವುದಾಗಿ ತಿಳಿದುಬಂದಿದೆ. ಮೊಹರಂ ಹಬ್ಬದ ಪ್ರಯುಕ್ತ ಜೂನ್ 17ರಿಂದ ಜೂನ್ 26ರವರೆಗೆ ವಿವಿಧ ಕಾರ್ಯಕ್ರಮ ನಡೆಯಲಿವೆ. ರಾಯಚೂರು ಜಿಲ್ಲೆಯ ಲಿಂಗಸುಗೂರು ತಾಲೂಕಿನ ಮುದಗಲ್ ಪಟ್ಟಣದಲ್ಲಿ ಐತಿಹಾಸಿಕ ಪ್ರಸಿದ್ಧ ಮೊಹರಂ ಆಚರಣೆ ಇದ್ದು, ಜೂನ್ 22ರಿಂದ 24ರವರೆಗೆ ಪ್ರತಿದಿವಸ ಸುಮಾರು 25 ರಿಂದ 30 ಸಾವಿರ ಜನರು ಇಲ್ಲಿ ಸೇರುವ ಸಾಧ್ಯತೆ ಇರುತ್ತದೆ. ಅಲ್ಲದೆ ಜೂನ್ 25ರಂದು ಖತಲ್ ರಾತ್ರಿ ದಿನ ಸುಮಾರು 70 ರಿಂದ 80 ಸಾವಿರ ಜನ ಸೇರುವ ನಿರೀಕ್ಷೆ ಇರುತ್ತದೆ. ಜೂನ್ 26ರ ದಫನ್ ಕಾರ್ಯಕ್ರಮದ ಮೆರವಣಿಗೆ

3ನೇ ಪುಟ.....

ಸಂಗೀತಕ್ಕೆ ರೋಗ ನಿರೋಧಕ ಶಕ್ತಿ ಇದೆ: ಬಡಿಗೇರ್

ರಾಯಚೂರು.ಜೂ.15

ಸಂಗೀತವು ಪ್ರತಿಯೊಬ್ಬರ ಜೀವನದಲ್ಲಿ ಅವಶ್ಯಕವಾಗಿ ಇರುವಂತ ಸಾಧನ. ಸಂಗೀತಕ್ಕೆ ರೋಗ ನಿರೋಧಕ ಶಕ್ತಿ ಇದೆ ಎಂದು ಹಿರಿಯ ಪತ್ರಕರ್ತರಾದ ಮಾರುತಿ ಬಡಿಗೇರ್ ಹೇಳಿದರು.

ಅವರು ಗುರುವಾರ ನಗರದ ಮನೋರಂಜನಾ ಕೇಂದ್ರದಲ್ಲಿ ಮೇಘ ಕಲಾ ನಿಕೇತನ ಸಂಸ್ಥೆ ರಾಯಚೂರು ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು ಇವರ ಸಹಯೋಗದಲ್ಲಿ ನಡೆದ ಸಾಂಸ್ಕೃತಿಕ ವೈಭವ ಸಾಂಸ್ಕೃತಿಕ ಕಾರ್ಯಕ್ರಮದ ಉದ್ಘಾಟಿಸಿ ಮಾತನಾಡಿದರು.

ಸರ್ವ ರೋಗಗಳಿಗೆ ಸಂಗೀತವೇ ಮದ್ದು, ಸಂಗೀತ ಕೇಳಿದರೆ ಎಲ್ಲಾವನ್ನು ನೆನಪಿಸುವ ಮತ್ತು ಮರೆಸುವಂತಹ ಶಕ್ತಿ ಹೊಂದಿದೆ ಎಂದು ಹೇಳಿದರು.



ಇದೇ ವೇಳೆ ಗಾಯಕರಾದ ಜಾನ್ಸಿ ರಾಣಿ, ಅಸ್ಲಾಂ ಖಾಜಾ, ಹೇಮಲತಾ, ಶಂಕರ್ ಸೈಯದ್ ವಲಿ, ಗುರುರಾಜ್, ಜಿ. ಬಸವ ರಾಜ್, ಸಂತೋಷಿ, ಸಂಗೀತ ಅವರು ಉತ್ತಮ ಭಾವಗೀತೆಗಳು ಸುಗಮ ಸಂಗೀತ ತುಂಬಾ ಅಚ್ಚುಕಟ್ಟಾಗಿ ನೆರವೇರಿಸಿದರು.

ಕೀಬೋರ್ಡ್ ವಾದಕರಾದ ವೆಂಕಟೇಶ್ ಆಲ್ಕೋಡ್ , ಶ್ರೀನಾಥ್ ತಬಲವಾದಕರು.

ವೇದಿಕೆ ಮೇಲೆ ಅತಿಥಿಗಳು ಭಾಗವಹಿಸಿದ್ದರು. ಮೇಘ ಕಲಾನಿಕೇತನ ಸಂಸ್ಥೆಯ ಅಧ್ಯಕ್ಷರಾದ ನರೇಂದ್ರ ಮನಕರ್ ಕಾರ್ಯಕ್ರಮವನ್ನು ನಿರ್ವಹಿಸಿದರು.

ಚಿನ್ನದ ಉತ್ಪಾದನೆಯ ಹಿಂದೆ ಕಾರ್ಮಿಕರ ಬೆವರು

ನ್ಯಾಯಯುತ ಹಕ್ಕುಗಳಿಗೆ ಹೋರಾಟ ಅನಿವಾರ್ಯ-ಮೀನಾಕ್ಷಿ ಸುಂದರಂ

ಹಟ್ಟಿಚಿನ್ನದ ಗಣಿ,ಜೂ.18-

ಕಾರ್ಮಿಕರ ನ್ಯಾಯಯುತ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ನಾವು ಶಾಂತಿಯುತ ಹೋರಾಟ ನಡೆಸುತ್ತಿದ್ದೇವೆ. ಆದರೆ ಕಾರ್ಮಿಕರೊಂದಿಗೆ ಮಾತುಕತೆ ನಡೆಸುವ ಬದಲು ಆಡಳಿತ ನ್ಯಾಯಾಲಯದ ಇಂಜಂಕ್ಷನ್ ಆದೇಶದ ನೆಪ ಹೇಳುತ್ತಿದೆ.ಧರಣಿ ಸ್ಥಳಕ್ಕೆ ಬಂದು ಸಮಸ್ಯೆಗಳನ್ನು ಆಲಿಸಿ ಪರಿಹಾರ ಕಂಡುಕೊಳ್ಳುವ ಮನೋಭಾವ ತೋರಬೇಕಾಗಿತ್ತುಎಂದು ಸಿಐಟಿಯು ರಾಜ್ಯಾಧ್ಯಕ್ಷರು ಹಾಗೂ ಹಟ್ಟಿ ಚಿನ್ನದ ಗಣಿ ಸಿಬ್ಬಂದಿ ಮತ್ತು ಕಾರ್ಮಿಕ ಸಂಘದ ಗೌರವಾಧ್ಯಕ್ಷರಾದ ಕಾಮ್ರೇಡ್ ಮೀನಾಕ್ಷಿ ಸುಂದರಂ ಹೇಳಿದರು.



ಹಟ್ಟಿ ಚಿನ್ನದ ಗಣಿ ಸಿಬ್ಬಂದಿ ಮತ್ತು ಕಾರ್ಮಿಕ ಸಂಘದಿಂದ ಕಂಪನಿಯ ಮುಖ್ಯ ಕಾರ್ಯಾಲಯದ ಮುಂದೆ ಬುಧುವಾರದಂದು 2 ನೇ ದಿನದ ಅನಿರ್ದಿಷ್ಟಾವಧಿ ಪ್ರತಿಭಟನಾ ಧರಣಿಯನ್ನುದ್ದೇಶಿಸಿ ಅವರು ಮಾತನಾಡಿದರು.

ನಾವು ಕಂಪನಿಯನ್ನು ಹಾಳು ಮಾಡಲು ಹೋರಾಟ ನಡೆಸುತ್ತಿಲ್ಲ.ಈ ಸಾರ್ವಜನಿಕ ಉದ್ದಿಮೆ ಉಳಿಯಬೇಕು, ಬೆಳೆಯಬೇಕು,ಮುಂದಿನ ಪೀಳಿಗೆಗೂ ಉದ್ಯೋಗ ನೀಡಬೇಕು ಎಂಬುದು ನಮ್ಮ ಆಶಯ.ಆದರೆ ಕಾರ್ಮಿಕರ ಬದುಕು ಮತ್ತು ಭವಿಷ್ಯದ ಪ್ರಶ್ನೆಗಳನ್ನು ನಿರ್ಲಕ್ಷಿಸುವುದನ್ನು ಒಪ್ಪಿಕೊಳ್ಳಲು ಸಾಧ್ಯವಿಲ್ಲ ಎಂದರು.

ಇಂದು ಚಿನ್ನದ ಬೆಲೆ ಏರಿಕೆಯಾಗಿದೆ,ಕಂಪನಿಯ ಆದಾಯ ಹೆಚ್ಚಾಗಿದೆ.ಆದರೆ ಅದರ ಹಿಂದೆ ಭೂಮಿಯಾಳದಲ್ಲಿ ಜೀವವನ್ನು ಪಣಕ್ಕಿಟ್ಟು ದುಡಿಯುವ ಕಾರ್ಮಿಕರ ಶ್ರಮ ಮತ್ತು ಬೆವರಿದೆ.ಕಾರ್ಮಿಕರ ದುಡಿಮೆಯಿಂದಲೇ ರಾಜ್ಯ ಸರ್ಕಾರದ ಬೊಕ್ಕಸಕ್ಕೆ ಕೋಟ್ಯಂತರ ರೂಪಾಯಿ ಆದಾಯ ಹರಿದು ಬರುತ್ತಿದೆ. ಆದರೆ ಅದೇ ಕಾರ್ಮಿಕರ ನ್ಯಾಯಯುತ ಬೇಡಿಕೆಗಳ ವಿಚಾರದಲ್ಲಿ ಆಡಳಿತ ಮೌನ ವಹಿಸಿರುವುದು ವಿಷಾದನೀಯಎಂದು ಹೇಳಿದರು.

ಏಪ್ರಿಲ್ 1ರಿಂದಲೇ ಹೊಸ ವೇತನ ಒಪ್ಪಂದ ಜಾರಿಯಾಗಬೇಕು ಎಂದು ನಾವು ಸ್ಪಷ್ಟವಾಗಿ ತಿಳಿಸಿದ್ದೇವೆ. ಮೆಡಿಕಲ್ ಅನ್‌ಫಿಟ್ ಯೋಜನೆ ಸೇರಿದಂತೆ ದೀರ್ಘಕಾಲದ ಬೇಡಿಕೆಗಳನ್ನು ಈಡೇರಿಸಬೇಕು.ಆರಂಭದಲ್ಲಿ ಬೇಡಿಕೆಗಳ ಫಲಕ ಧರಿಸಿ ಕೆಲಸ ನಿರ್ವಹಿಸಿದೆವು.ನಂತರ ಕಪ್ಪು ಪಟ್ಟಿ ಧರಿಸಿ ಕೆಲಸ ಮಾಡಿದೆವು.ಬಳಿಕ ಘೋಷಣೆಗಳೊಂದಿಗೆ ಪ್ರತಿಭಟನೆ ನಡೆಸಿದೆವು.ಈಗ ಅನಿರ್ದಿಷ್ಟಾವಧಿ ಧರಣಿ ಆರಂಭಿಸಿದ್ದೇವೆ.ಆದರೂ ಆಡಳಿತ ಸ್ಪಂದಿಸುತ್ತಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

3ನೇ ಪುಟ.....

ಭಾರತೀಯ ರೈಲ್ವೆ - ದಿವ್ಯಾಂಗಜನ ರಿಯಾಯಿತಿ ಕಾರ್ಡ್ ಆನ್ಲೈನ್‌ನಲ್ಲಿ ಲಭ್ಯ: ಡಾ.ಬಾಬುರಾವ್









ರಾಯಚೂರು,ಜೂ.18-

ಭಾರತೀಯ ರೈಲ್ವೆ ಈಗ ದಿವ್ಯಾಂಗಜನ ಪ್ರಯಾಣಿಕರಿಗೆ ರೈಲ್ವೆ ರಿಯಾಯಿತಿ ಫೋಟೋ ಗುರುತಿನ ಚೀಟಿ ನೀಡಿಕೆ ಮತ್ತು ನವೀಕರಣವನ್ನು ಸೌಲಭ್ಯವನ್ನು ಇನ್ನು ಮುಂದೆ ಸಂಪೂರ್ಣ ಆನ್ಲೈನ್ ಮೂಲಕ ಪಡೆಯಬಹುದಾಗಿದೆ ಎಂದು ರೈಲ್ವೆ ಸಲಹಾ ಸಮಿತಿ ಮಾಜಿ ಸದಸ್ಯ ಡಾ. ಬಾಬುರಾವ್ ಅವರು ತಿಳಿಸಿದ್ದಾರೆ.

ಈ ಕುರಿತು ಹೇಳಿಕೆಯೊಂದನ್ನು ನೀಡಿರುವ ಅವರು, ಸಂಪೂರ್ಣ ಆನ್ಲೈನ್ ನಲ್ಲಿ ಅರ್ಜಿ ಸಲ್ಲಿಕೆ, ದಾಖಲೆ ಅಪ್ಲೋಡ್, ಸ್ಥಿತಿ ಪರಿಶೀಲನೆ, ಅನುಮೋದಿತ ಕಾರ್ಡ್ ಡೌನ್ಲೋಡ್ - ಎಲ್ಲವೂ ಡಿಜಿಟಲೀಕರಣ ಮಾಡಲಾಗಿದೆ.

ರೈಲ್ವೆ ಕಚೇರಿಗೆ ಹೋಗುವ ಅಗತ್ಯವಿಲ್ಲ: ಮೊದಲು ರೈಲ್ವೆ ಕಚೇರಿಗೆ ಹೋಗಬೇಕಿತ್ತು. ಅಲ್ಲಿಂದ ಡಿವಿಜನಲ್ ಕಚೇರಿಗೆ ರವಾನೆ ಆಗಿ ಅಲ್ಲಿ ಪರಿಶೀಲನೆ ಮಾಡಿ ಕಾರ್ಡ್ ನೀಡಲಾಗುತ್ತಿತ್ತು. ಹಲವು ದಿನಗಳ ಕಾಲ ಕಾಯಬೇಕಾಗಿತ್ತು. ಈಗ ಡಿಜಿಟಲ್ ಆಗಿ ಆಗುತ್ತದೆ ರೈಲು

3ನೇ ಪುಟ.....

ಯರಮರಸ್ ಜಿ.ಪಂ ತರಬೇತಿ ಕೇಂದ್ರದ ಬಾಗಿಲು ಮುರಿತ

ಆರೋಪಿಗಳ ಬಂಧಿಸಲು ಪ್ರಕರಣ ದಾಖಲು

ರಾಯಚೂರು ಜೂನ್ 18

ರಾಯಚೂರು ನಗರದ ಹೊರ ವಲಯದಲ್ಲಿರುವ ಯರಮರಸ್ ವಿಐಪಿ ಗೆಸ್ಟ್ ಹೌಸ ಹತ್ತಿರ ಇರುವ ಜಿಲ್ಲಾ ಪಂಚಾಯತ ತರಬೇತಿ ಕೇಂದ್ರದ ಬೀಗ ಮುರಿದು ಅಕ್ರಮವಾಗಿ ಒಳನುಗ್ಗಿ ಕೇಂದ್ರದಲ್ಲಿರುವ ಕೆಲ ಸಾಮಾಗ್ರಿಗಳನ್ನು ಮುರಿದು ಬೀಸಾಕಿರುವ ಆರೋಪಿಗಳನ್ನು ತಕ್ಷಣವೇ ಪತ್ತೆ ಹಚ್ಚಿ ಬಂಧಿಸಬೇಕೆದು ಜಿ.ಪಂ.ಯೋಜನಾಧಿಕಾರಿಗಳು ಅವರು ನೀಡಿದ ದೂರಿನ ಮೇರೆಗೆ ರಾಯಚೂರು ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದವರಿಸಲಾಗಿದೆ.

ಜಿಲ್ಲಾ ಪಂಚಾಯತ್ ರಾಯಚೂರು ಅಡಿಯಲ್ಲಿ ಬರುವ ಜಿಲ್ಲಾ ಪಂಚಾಯತ್ ಸಂಪನ್ಮೂಲ ಕೇಂದ್ರ, ವಿಐಪಿ ಗೆಸ್ಟ್ ಹೌಸ್ ಪಕ್ಕದಲ್ಲಿರುವ ತರಬೇತಿ ಕೇಂದ್ರದಲ್ಲಿ ದಿನಾಂಕ 14-06-2026 ರಂದು ಕೆಆರ್‌ಐಡಿಎಲ್ ಇಲಾಖೆ ವತಿಯಿಂದ ಕಟ್ಟಡದ ಪ್ಲಂಬರ್ ಕೆಲಸ ಮಾಡಿ ಹೋಗಿದ್ದಾರೆ.

ನಂತರ ತರಬೇತಿ ಕೇಂದ್ರಕ್ಕೆ ರಾತ್ರಿ ಕಾವಲುಗಾರ ಸಿಬ್ಬಂದಿ ಜಂಗ್ಲಪ್ಪ ಆಗಮಿಸಿದ್ದಾಗ ಯಾರು ಅಪರಿಚಿತ ವ್ಯಕ್ತಿಗಳು ಬಂದು ತರಬೇತಿ ಕೇಂದ್ರ ಮುಖ್ಯದ್ವಾರದ ಬೀಗ ಮುರಿದು ಅತಿಕ್ರಮ ಪ್ರವೇಶ ಮಾಡಿ ಕೇಂದ್ರದ ಊಟೋಪಚಾರ ಕೊಠಡಿಯಲ್ಲಿ ಹಾಕಿದ ನಳಗಳನ್ನು ಹೊಡೆದು ಹಾಕಿ ಚಲ್ಲಾಪಿಲ್ಲಿಯಾಗಿ ಬಿಸಾಕಿರುವದನ್ನು ಗಮನಿಸಿ ತಕ್ಷಣವೇ ಹೋಗಿ ನೋಡಿದಾಗ ತರಬೇತಿ ಕೇಂದ್ರದ ಬೀಗ ಬಾಗಿಲ ಕೊಂಡಿಯನ್ನು ಮುರಿದಿದ್ದು, ಒಳಗಡೆ ಹೋಗಿ ನೋಡಿದಾಗ ಉಟೋಪಚಾರ ಕೊಠಡಿಯಲ್ಲಿ ನಳಗಳನ್ನು ಮುರಿದು ಸುಮಾರು 10,000/- ರೂ.ನಷ್ಟು ಹಾನಿಯಾಗಿದೆ.

ಕೆಲ ಅಪರಿಚಿತ ವ್ಯಕ್ತಿಗಳು ಬಂದು ರಾತ್ರಿ ವೇಳೆ ತರಬೇತಿ ಕೇಂದ್ರ ಮುಖ್ಯದ್ವಾರ್ ಬೀಗ ಮುರಿದು ಒಳಗೆ ನುಗ್ಗಿ ಸಾಮಾನುಗಳನ್ನು ಮುರಿದು ಚೆಲಿಪಿಲ್ಲಿಯಾಗಿ ಬೀಸಕಿದ್ದಾರೆ. ಈ ಘಟನೆಗೆ ಸಂಬಧಿಸಿ ಜಿಲ್ಲಾ ಪಂಚಾಯತ ಮುಖ್ಯ ಯೋಜನಾಧಿಕಾರಿಗಳಾದ ಡಾ.ಟಿ.ರೋಣಿ ಅವರು ಆರೋಪಿಗಳ ವಿರುದ್ದ ಕ್ರಮ ಜರುಗಿಸಬೇಕೆಂದು ರಾಯಚೂರು ಗ್ರಾಮೀಣ ಪೊಲೀಸ್ ಠಾಣೆಗೆ ದೂರು ನೀಡಿರುತ್ತಾರೆ.

3ನೇ ಪುಟ.....

ಕನ್ನಡ ಉಳಿದರೆ ಗಡಿನಾಡು ಉಳಿಯುತ್ತದೆ: ಟೆನ್ನಿಸ್ ಕೃಷ್ಣ

ಏಮ್ಸ್ ಸ್ಥಾಪನೆಗೆ ಕನ್ನಡ ಸೇನೆಯ ಬೃಹತ್ ಬೈಕ್ ಜಾಥಾ

ರಾಯಚೂರು, ಜೂ.18-

ಗಡಿನಾಡಿನಲ್ಲಿ ಕನ್ನಡ ಭಾಷೆ, ನೆಲ, ಜಲ ಮತ್ತು ಸಂಸ್ಕೃತಿಯ ಅಸ್ತಿತ್ವ ಉಳಿಸಬೇಕಾದರೆ ಕನ್ನಡಿಗರು ಪಕ್ಷಾತೀತವಾಗಿ ಒಂದಾಗಬೇಕು ಹಾಗೂ ಕನ್ನಡ ಶಾಲೆಗಳ ಮುಚ್ಚುವಿಕೆಯನ್ನು ತಕ್ಷಣ ನಿಲ್ಲಿಸಿ ರಾಯಚೂರಿನಲ್ಲಿ ಏಮ್ಸ್ ಆಸ್ಪತ್ರೆ ಸ್ಥಾಪಿಸಬೇಕು ಎಂದು ಕನ್ನಡ ಸೇನೆ ಕರ್ನಾಟಕ ರಾಜ್ಯಾಧ್ಯಕ್ಷ ಕೆ.ಆರ್. ಕುಮಾರ್ ಸರ್ಕಾರವನ್ನು ಆಗ್ರಹಿಸಿದರು.

ರಾಜ್ಯಾಧ್ಯಕ್ಷರ ಹುಟ್ಟುಹಬ್ಬದ ಅಂಗವಾಗಿ ಕನ್ನಡ ಸೇನೆ-ಕರ್ನಾಟಕ ಸಂಘಟನೆ ಆಯೋಜಿಸಿದ್ದ ★ಗಡಿನಾಡು ಕನ್ನಡ ಜಾಗೃತಿ ಜಾಥಾ★ದಲ್ಲಿ ಮಾತನಾಡಿದ ಅವರು, ''ಕನ್ನಡ ಉಳಿದರೆ ಮಾತ್ರ



ಗಡಿನಾಡಿನ ಅಸ್ತಿತ್ವ ಉಳಿಯುತ್ತದೆ. ಕನ್ನಡಿಗರು ಒಗ್ಗಟ್ಟಿನಿಂದ ಹೋರಾಟ ನಡೆಸಿದಾಗ ಮಾತ್ರ ಭಾಷೆ, ನೆಲ, ಜಲ ಮತ್ತು ಸಂಸ್ಕೃತಿಯನ್ನು ಉಳಿಸಬಹುದು'' ಎಂದು ಹೇಳಿದರು.

ನಗರದ ಆರ್‌ಟಿಒ ವೃತ್ತದಿಂದ ಆರಂಭವಾದ ಬೃಹತ್ ಬೈಕ್ ಜಾಥಾ ನಗರದ ಪ್ರಮುಖ ರಸ್ತೆಗಳಲ್ಲಿ ಸಂಚರಿಸಿ ಜಿಲ್ಲಾಧಿಕಾರಿಗಳ ಕಚೇರಿಗೆ ತಲುಪಿತು. ಬಳಿಕ ಜಿಲ್ಲಾಧಿಕಾರಿಗಳ ಮೂಲಕ ಮುಖ್ಯಮಂತ್ರಿಗಳಿಗೆ ವಿವಿಧ ಬೇಡಿಕೆಗಳನ್ನು ಒಳಗೊಂಡ ಮನವಿಪತ್ರ ಸಲ್ಲಿಸಲಾಯಿತು.

ರಾಜ್ಯದಲ್ಲಿ ಕನ್ನಡ ನಾಮಫಲಕಗಳನ್ನು ಕಡ್ಡಾಯವಾಗಿ ಜಾರಿಗೊಳಿಸಬೇಕು, ಸರ್ಕಾರಿ ಕನ್ನಡ ಶಾಲೆಗಳನ್ನು ಮುಚ್ಚದೇ ಅಭಿವೃದ್ಧಿಪಡಿಸಬೇಕು ಹಾಗೂ ಕನ್ನಡಿಗರಿಗೆ ಉದ್ಯೋಗದಲ್ಲಿ ಆದ್ಯತೆ ನೀಡಬೇಕು ಎಂದು ಅವರು ಒತ್ತಾಯಿಸಿದರು.

ರಾಯಚೂರು ಜಿಲ್ಲೆ ಅಭಿವೃದ್ಧಿಯ ದೃಷ್ಟಿಯಿಂದ ಹಿಂದುಳಿದಿರುವ ಹಿನ್ನೆಲೆಯಲ್ಲಿ ಅತ್ಯಾಧುನಿಕ ಆರೋಗ್ಯ ಸೇವೆಗಳ ಅಗತ್ಯವಿದ್ದು, ಉತ್ತರ ಕರ್ನಾಟಕ ಭಾಗದ ಜನರಿಗೆ ಅನುಕೂಲವಾಗುವಂತೆ ರಾಯಚೂರಿನಲ್ಲಿ ಏಮ್ಸ್ ಆಸ್ಪತ್ರೆ ಸ್ಥಾಪನೆ ಅನಿವಾರ್ಯ ಎಂದು

3ನೇ ಪುಟ.....

ಬಳ್ಳಾರಿ: ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳ ಜಿಲ್ಲಾ ಮಟ್ಟದ ಮಾಸಿಕ ಪ್ರಗತಿ ಪರಿಶೀಲನಾ ಸಭೆ

ಕರ್ತವ್ಯ ಲೋಪವೆಸಗಿದರೆ ಕಟ್ಟುನಿಟ್ಟಿನ ಕ್ರಮ: ಡಾ.ಶಂಕ್ರಪ್ಪ ಮೈಲಾರಿ



ಬಳ್ಳಾರಿ,ಜೂ.18

ಎಲ್ಲಾ ವೈದ್ಯಾಧಿಕಾರಿಗಳು ಮತ್ತು ಸಿಬ್ಬಂದಿ ವರ್ಗ 'ಕಾವಸ್' (ಕರ್ನಾಟಕ ಸುಧಾರಿತ ಹಾಜರಾತಿ ನಿರ್ವಹಣಾ ವ್ಯವಸ್ಥೆ) ತಂತ್ರಾಂಶದ ಮೂಲಕ ಹಾಜರಾತಿಯನ್ನು ತಪ್ಪದೇ ದಾಖಲಿಸಬೇಕು. ಕರ್ತವ್ಯದ ಅವಧಿಯಲ್ಲಿ ಕೇಂದ್ರಸ್ಥಾನದಿಂದ ಹೊರಗೆ ಹೋಗುವ ಸಂದರ್ಭ ಎದುರಾದರೆ ಕಡ್ಡಾಯವಾಗಿ ಚಲನವಲನ ಪುಸ್ತಕದಲ್ಲಿ ನಮೂದಿಸಬೇಕು ಎಂದು ಕಲಬುರಗಿ ವಿಭಾಗದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಸಹ ನಿರ್ದೇಶಕ ಡಾ.ಶಂಕ್ರಪ್ಪ ಮೈಲಾರಿ ಅವರು ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇವರ ಜಂಟಿ ಆಶ್ರಯದಲ್ಲಿ ನಗರದ ಡಿಹೆಚ್‌ಓ ಸಭಾಂಗಣದಲ್ಲಿ ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳ ಕುರಿತು ಬುಧವಾರ ಆಯೋಜಿಸಿದ್ದ ವೈದ್ಯಾಧಿಕಾರಿಗಳ ಜಿಲ್ಲಾ ಮಟ್ಟದ ಮಾಸಿಕ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಯಾವುದೇ ಕಾರಣಕ್ಕೂ ರೋಗಿಗಳಿಗೆ ಹೊರಗಿನ ಔಷಧಿಗಳನ್ನು ಬರೆದುಕೊಡಬಾರದು. ಖಾಸಗಿ ಆಸ್ಪತ್ರೆ ಅಥವಾ ಲ್ಯಾಬ್‌ಗಳಿಗೆ ರೋಗಿಗಳನ್ನು ಶಿಫಾರಸ್ಸು ಮಾಡುವುದನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ. ಆಸ್ಪತ್ರೆಗೆ ಅಗತ್ಯವಿರುವ ಔಷಧಿಗಳನ್ನು ಮುಂಚಿತವಾಗಿಯೇ ಇಂಡೆಂಟ್ ಮಾಡಿಕೊಳ್ಳಬೇಕು. ಆಸ್ಪತ್ರೆಯ ಒಳಗಡೆ ಮತ್ತು ಹೊರಗಡೆ ಸ್ವಚ್ಛತೆಯನ್ನು ಕಾಪಾಡಲು ಮೇಲ್ವಿಚಾರಣಾ ಸಿಬ್ಬಂದಿ ಪ್ರತಿದಿನ ಗಮನ ಹರಿಸಬೇಕು ಎಂದು ವೈದ್ಯಾಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

ಜಿಲ್ಲೆಯಲ್ಲಿ ಸುರಕ್ಷಿತ ಹೆರಿಗೆಗಳನ್ನು ಹೆಚ್ಚಿಸಲು ಸಮುದಾಯ ಆರೋಗ್ಯ ಕೇಂದ್ರ, ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ ತಾಲ್ಲೂಕು ಆಸ್ಪತ್ರೆಗಳಲ್ಲೇ ಹೆಚ್ಚಿನ ಹೆರಿಗೆಗಳನ್ನು ನಿರ್ವಹಿಸಬೇಕು. ಗರ್ಭಿಣಿಯರ ವಿವರಗಳನ್ನು ಮೊದಲ ಮೂರು ತಿಂಗಳ ಒಳಗಾಗಿಯೇ ಕಡ್ಡಾಯ ವಾಗಿ ದಾಖಲಿಸಿ, ನಿಯಮಿತ ತಪಾಸಣೆ ನಡೆಸಬೇಕು. ಇದರಿಂದ ತೊಡಕಿನ ಗರ್ಭಿಣಿಯರನ್ನು ಆರಂಭದಲ್ಲೇ ಪತ್ತೆ ಹಚ್ಚಿ, ರಕ್ತಹೀನತೆ ನಿವಾರಿಸಿ ತಾಯಿ-ಶಿಶು ಮರಣಗಳನ್ನು ತಡೆಗಟ್ಟಲು ಸಾಧ್ಯವಾಗುತ್ತದೆ ಎಂದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ.ಯಲ್ಲಾ ರಮೇಶ್ ಬಾಬು ಅವರು ಮಾತನಾಡಿ ಆರೋಗ್ಯ ಕೇಂದ್ರಗಳಲ್ಲಿ ನಡೆಯುವ ಮಾಸಿಕ ಸಭೆಗಳಲ್ಲಿ ಪ್ರಾಥಮಿಕ ಆರೋಗ್ಯ ಸುರಕ್ಷಾ ಅಧಿಕಾರಿಗಳು ಮತ್ತು ಆಶಾ ಕಾರ್ಯಕರ್ತೆಯರು ತೊಡಕಿನ ಗರ್ಭಿಣಿಯರ ಮನೆ ಭೇಟಿ ಹಾಗೂ ಹೆರಿಗೆ ಹತ್ತಿರವಿರುವ ಗರ್ಭಿಣಿಯರ ಮಾಹಿತಿಯನ್ನು ವೈದ್ಯರಿಗೆ ಕಡ್ಡಾಯವಾಗಿ ತಲುಪಿಸಬೇಕು ಎಂದರು.

ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳ ಬಗ್ಗೆ ಆಸ್ಪತ್ರೆಗಳಲ್ಲಿರುವ ಟಿವಿಗಳ ಮೂಲಕ ಸಾರ್ವಜನಿಕರಿಗೆ ಜಾಗೃತಿ ಮೂಡಿಸಬೇಕು. ಪ್ರಸ್ತುತ ಮಳೆಗಾಲ ಆರಂಭವಾಗಿರುವುದರಿಂದ ನೀರು ನಿಲ್ಲದಂತೆ ಮುನ್ನೆಚ್ಚರಿಕೆ ವಹಿಸಲು ಕ್ಷೇತ್ರ ಮಟ್ಟದಲ್ಲಿ ಹೆಚ್ಚಿನ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇ ಕು. ನಾಯಿ ಕಡಿತ ಹಾಗೂ ಹಾವಿನ ಕಡಿತದ ಕುರಿತು ಗ್ರಾಮ ಪಂಚಾಯತಿ, ಶಾಲೆಗಳು ಮತ್ತು ಸಮುದಾಯ ಸಭೆಗಳ ಮೂಲಕ ನಿರಂತರವಾಗಿ ಜಾಗೃತಿ ಮೂಡಿಸಬೇಕು ಎಂದು ವೈದ್ಯಾಧಿಕಾ ರಿಗಳಿಗೆ ಕಟ್ಟುನಿಟ್ಟಿನ ನಿರ್ದೇಶನ ನೀಡಿದರು.

ಜಿಲ್ಲಾ ಕ್ಷಯರೋಗ ನಿರ್ಮೂಲನಾಧಿಕಾರಿ ಡಾ.ಇಂದ್ರಾಣಿ ಅವರು ಮಾತನಾಡಿ, ಕ್ಷಯರೋಗಿಗಳ ಪೌಷ್ಟಿಕಾಂಶದ ಕೊರತೆ ನೀಗಿಸಲು 'ನಿಕ್ಷಯ ಮಿತ್ರ' ಯೋಜನೆಯಡಿ ದಾನಿಗಳನ್ನು ನೋಂದಾಯಿಸಲು ಕ್ರಮ ಕೈಗೊಳ್ಳಲಾಗುವುದು ಮತ್ತು ಗರ್ಭಿಣಿಯರಿಗೆ ಮೊದಲ ತ್ರೈಮಾಸಿಕದಲ್ಲೇ ಹೆಚ್.ಐ.ವಿ., ಹೆಪಟೈಟೀಸ್ ಮತ್ತು ಸಿಫಿಲಿಸ್ ಪರೀಕ್ಷೆಗಳನ್ನು ಮಾಡಿಸಬೇಕು ಎಂದು ತಿಳಿಸಿದರು.

ಸಭೆಯಲ್ಲಿ ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣ ಅಧಿಕಾರಿ ಡಾ.ಆರ್. ಅಬ್ದುಲ್ಲಾ, ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ.ಮರಿಯಂಬಿ ವಿ.ಕೆ., ಜಿಲ್ಲಾ ಆರ್.ಸಿ.ಹೆಚ್ ಅಧಿಕಾರಿ ಡಾ.ಹನುಮಂತಪ್ಪ, ಜಿಲ್ಲಾ ಕುಷ್ಠರೋಗ ನಿರ್ಮೂಲನಾಧಿಕಾರಿ ಡಾ.ವೀರೇಂದ್ರ ಕುಮಾರ್ ಸೇರಿದಂತೆ ಜಿಲ್ಲೆಯ ಎಲ್ಲಾ ತಾಲ್ಲೂಕು ಆರೋಗ್ಯ ಅಧಿಕಾರಿಗಳು ಹಾಗೂ ಎಲ್ಲಾ ಆಡಳಿತ ವೈದ್ಯಾಧಿಕಾರಿಗಳು ಉಪಸ್ಥಿತರಿದ್ದರು.



ಹೆಣ್ಣು ಭ್ರೂಣ ಹತ್ಯೆ ತಡೆಗಟ್ಟುವಲ್ಲಿ ವೈದ್ಯರ ಪಾತ್ರ ಬಹು ಮುಖ್ಯ

ಬೀದರ, ಜೂ.18-

ಹೆಣ್ಣಿಗೆ ಭಾರತೀಯ ಸಂಸ್ಕೃತಿಯಲ್ಲಿ ವಿಶಿಷ್ಟ ಸ್ಥಾನಮಾನಗಳಿದ್ದು, ಹೆಣ್ಣು ಭ್ರೂಣ ಹತ್ಯೆ ತಡೆಗಟ್ಟುವಲ್ಲಿ ವೈದ್ಯರ ಪಾತ್ರ ಬಹಳ ಪ್ರಮುಖ್ಯವಾಗಿದೆ ಎಂದು ಬೀದರ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಸದಸ್ಯ ಕಾರ್ಯದರ್ಶಿಗಳು ಹಾಗೂ ಹಿರಿಯ ಸಿವಿಲ್ ನ್ಯಾಯಾಧೀಶರು ಗೌರವಾನ್ವಿತ ಶ್ರೀ ರಾಘವೇಂದ್ರ ಉಪಾಧ್ಯಾಯ ಅವರು ಹೇಳಿದರು.

ಬೀದರ ನಗರದ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಭಾಂಗಣದಲ್ಲಿ ಜೂ.17ರ ಬುಧವಾರ ರಂದು ಪಿ.ಸಿ.ಪಿ.ಎನ್.ಡಿ.ಟಿ ಜಿಲ್ಲೆಯ ಎಲ್ಲಾ ಸ್ಕ್ಯಾನಿಂಗ್ ಕೇಂದ್ರಗಳ ವೈದ್ಯಾಧಿಕಾರಿಗಳಾದ ಸ್ತ್ರೀರೋಗ ತಜ್ಞರು ಹಾಗೂ ರೇಡಿಯೋಲಾಜಿಸ್ಟ್, ಪಿ.ಸಿ.ಪಿ.ಎನ್.ಡಿ.ಟಿ ಕಾಯಿದೆಯ ಸಮರ್ಪಕ ಅನು ಷ್ಠಾನಕ್ಕಾಗಿ ಕಾರ್ಯಾಗಾರ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಹೆಣ್ಣಿಗೆ ಭಾರತಿಯ ಸಂಸ್ಕೃತಿಯಲ್ಲಿ ವಿಶಿಷ್ಟ ಸ್ಥಾನಮಾನಗಳಿದ್ದು ಹೆಣ್ಣು ಭ್ರೂಣ ಹತ್ಯೆ ತಡೆಗಟ್ಟುವಲ್ಲಿ ವೈದ್ಯರ ಪಾತ್ರ ಬಹಳ ಮುಖ್ಯವಾಗಿದ್ದು ಎಲ್ಲರೂ ಪಿ.ಸಿ.ಪಿ.ಎನ್.ಡಿ.ಟಿ ಕಾಯಿದೆಯ ಅನುಸಾರ ಸ್ಕ್ಯಾನಿಂಗ್ ಕೇಂದ್ರಗಳನ್ನು ನಡೆಸಿಕೊಂಡು ಹೋಗುವಂತೆ ಸೂಚಿಸಿದರು.

ಈ ಸಂದರ್ಭದಲ್ಲಿ ಬೀದರ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ.ಧ್ಯಾನೇಶ್ವರ ನಿರಗುಡೆ, ಜಿಲ್ಲಾ ಪಿ.ಸಿಪಿಎನ್.ಡಿ.ಟಿ ನೋಡಲ್ ಅಧಿಕಾರಿ ಡಾ.ದೀಲಿಪ್ ಡೋಂಗ್ರೆ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಜಿಲ್ಲಾ ಶಸ್ತ್ರ ಚಿಕಿತ್ಸ ರಾದ ಡಾ.ಅಹೆಮ ದುದ್ದಿನ್, ಬೀದರ ಬ್ರೀಮ್ಸ್ ಬೋಧಕ ಆಸ್ಪತ್ರೆ ವಿಭಾಗ ಸ್ರೀ ರೋಗ ತಜ್ಞರ ಮುಖ್ಯಸ್ಥರು ಡಾ.ಉಮಾ ದೇಶಮುಖ,

ಬ್ರೀಮ್ಸ್ ಬೋಧಕ ಆಸ್ಪತ್ರೆ ವಿಭಾಗ ರೇಡಿಯೋಲಾಜಿ ಮುಖ್ಯಸ್ಥರು ಡಾ.ಅಶೋಕ ಕಟ್ಟಿಮನಿ, ಬೀದರ ಬ್ರೀಮ್ಸ್ ಬೋಧಕ ಆಸ್ಪತ್ರೆ ಡಾ.ಮಹೇಶ ತೊಂಡಾರೆ, ಸ್ತ್ರೀರೋಗ ತಜ್ಞರು, ಡಾ.ಆರತಿ ಆರ್.ಕೃಷ್ಣಮೂರ್ತಿ, ಡಾ.ಲಕ್ಷ್ಮೀಕಾಂತ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಿಬ್ಬಂದಿ ಮಹೇಶ್ವರ ರೆಡ್ಡಿ ಮುದಾಸಿರ, ಶಿವಾನಂದ ಉಪಸ್ಥಿತರಿದ್ದರು.



ಹೆದ್ದಾರಿ ಕಾಮಗಾರಿ ಪೂರ್ಣಗೊಳಿಸಿ ಸಂಚಾರ ಕಿರಿಕಿರಿ ತಪ್ಪಿಸಿ

ವಿಜಯನಗರ,ಜೂ.18-

ರಾಷ್ಟ್ರೀಯ ಹೆದ್ದಾರಿ ರಸ್ತೆ ನಿರ್ಮಾಣ ಕಾಮಗಾರಿ ತ್ವರಿತವಾಗಿ ಪೂರ್ಣಗೊಳಿಸಿ ವಾಹನ ಮುಕ್ತ ಸಂಚಾರಕ್ಕೆ ಅನುವು ಮಾಡಿಕೊಡುವ ಮೂಲಕ ಸಂಚಾರ ಕಿರಿ ಕಿರಿ ತಪ್ಪಿಸುವಂತೆ ಜಿಲ್ಲಾಧಿಕಾರಿ ಕವಿತಾ ಎಸ್. ಮನ್ನಿಕೇರಿ ನಿರ್ದೇಶಿಸಿದರು.

ನಗರದ ಜಿಲ್ಲಾಧಿಕಾರಿಗಳ ಕಚೇ ರಿಯಲ್ಲಿ ಗುರುವಾರ ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ವತಿಯಿಂದ ಹಾಗೂ ರಾಷ್ಟ್ರೀಯ ಹೆದ್ದಾರಿ ವಲಯಗಳ ವತಿಯಿಂದ ಜಿಲ್ಲೆಯಲ್ಲಿ ಅನುಷ್ಠಾನಗೊಳಿ ಸುತ್ತಿ ರುವ ರಸ್ತೆ ನಿರ್ಮಾಣ ಕಾಮಗಾರಿ ಗಳಲ್ಲಿ ಭೂಸ್ವಾಧೀನ ಮತ್ತು ಅರಣ್ಯ ಇಲಾಖೆ ತೀರುವಳಿಗಳಿಗೆ ಸಂಬಂಧಿ ಸಿದ ಜಿಲ್ಲಾ ಮಟ್ಟದ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಹೆದ್ದಾರಿ ಕಾಮಗಾರಿ ಪ್ರಗತಿಗೆ ಇರುವ ಭೂ ಸ್ವಾಧೀನ ಪ್ರಕ್ರಿಯೆ ಪೂರ್ಣಗೊಂಡಿದ್ದು, ಯಾವುದೇ ಗೊಂದಲ ಸಮಸ್ಯೆಗಳೂ ಇಲ್ಲ. ಆದರೂ ಕೆಲವೆಡೆ ಕಾಮಗಾರಿಗೆ ಹಿನ್ನೆಡೆಯಾಗುತ್ತಿರುವುದು ಸಾರ್ವಜನಿಕರಲ್ಲಿ ಸಾಕಷ್ಟು ತೊಂದರೆ ಅನುಭವಿಸುತ್ತಿದ್ದಾರೆ. ಹೆದ್ದಾರಿ ನಿರ್ಮಾಣವಾಗುತ್ತಿರುವ ಜಾಗಗಳಲ್ಲಿ ಕೆಲವೆಡೆ ಸಮರ್ಪಕ ಸರ್ವಿಸ್ ರಸ್ತೆಗಳಿಲ್ಲದೆ ಸ್ಥಳೀಯ ಗ್ರಾಮಸ್ಥರು ತೊಂದರೆ ಅನುಭವಿಸುತ್ತಿದ್ದಾರೆ. ಕೆಲವೆಡೆ ಸರ್ವಿಸ್ ರಸ್ತೆಗಳಿದ್ದರೂ ಸಹ ಅವೈಜ್ಞಾನಿಕವಾಗಿದ್ದು, ನೇರವಾಗಿ ಮುಖ್ಯ ರಸ್ತೆಗೆ ಸಂಪರ್ಕ ಹೊಂದಿಕೊಂಡಿವೆ. ಇದರಿಂದ ಸಾಕಷ್ಟು ಅಪಘಾತ ಪ್ರಕರಣ ದಾಖಲಾಗಿರುವ ಕುರಿತು ದೂರುಗಳು ಇವೆ.

ಆದ್ದರಿಂದ ಅಂತಹ ಅವೈಜ್ಞಾನಿಕ ಸ್ಥಳ ಗುರುತಿಸಿ ಅಗತ್ಯ ಕ್ರಮ ಕೈಗೊಳ್ಳಬೇಕು. ಅದಲ್ಲದೇ ಅಗತ್ಯವಿರುವೆಡೆ ಸೂಚನಾ ಫಲಕ, ಬ್ಯಾರಿಕೇಡ್ ಹಾಗೂ ರಾತ್ರಿ ವೇಳೆ ಎಚ್ಚರಿಕೆ ಬ್ಲಿಂಕರ್ ಸೋಲಾರ್ ವಿದ್ಯುತ್ ದೀಪ ಅಳವಡಿಸುವುದರ ಜೊತೆಗೆ ವೈಜ್ಞಾನಿಕವಾಗಿ ಸರ್ವಿಸ್ ರಸ್ತೆ ಹಾಗೂ ಅಂಡರ್‌ಪಾಸ್ ನಿರ್ಮಿಸ ಬೇಕು ಎಂದು ತಾಕೀತು ಮಾಡಿದರು.

ಜಿಲ್ಲೆಗೆ ಸಂಪರ್ಕ ಕಲ್ಪಿಸುವ ರಾಷ್ಟ್ರೀಯ ಹೆದ್ದಾರಿ ಕಾಮಗಾರಿಗಳ ಪೈಕಿ ಡಣಾಪುರ ವ್ಯಾಪ್ತಿಯಲ್ಲಿ 1 ಹಾಗೂ ಆಲೂರು ಬಳಿ 2 ಮುಖ್ಯ ಸೇತುವೆ ಸೇರಿ ಒಟ್ಟು 3 ಮುಖ್ಯ ಸೇತುವೆ ಕಾಮಗಾರಿ ನಿಗಧಿತ ಕಾಲ ಮಿತಿಯೊಳಗೆ ಪೂರ್ಣಗೊಳಿಸಲು ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಿದ ಅವರು, ಕಮಲಾಪುರ, ವೆಂಕಟಾಪುರ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಕಳೆದ ಆರು ತಿಂಗಳಲ್ಲಿ ಮೂರು ಚಿರತೆಗಳು ರಸ್ತೆ ಅಪಘಾತದಿಂದ ಸಾವನ್ನಪ್ಪಿವೆ. ಆದ್ದರಿಂದ ವನ್ಯಜೀವಿ ಸಂರಕ್ಷಿಸಿ ಪ್ರಾಣ ಹಾನಿ ತಪ್ಪಿಸಲು ಹೆದ್ದಾರಿಗೆ ಬ್ಯಾರಿಕೇಡ್ ಅಳವಡಿಸಲು ಸೂಚಿಸಿದ ಅವರು, ಕಾಮಗಾರಿಗಾಗಿ ಕಡಿಯಲಾದ ಮರಗಳಿಗೆ ಪರ್ಯಾಯವಾಗಿ ಹೆದ್ದಾರಿಯ ಇಕ್ಕೆಲಗಳಲ್ಲಿ ಕಡ್ಡಾಯವಾಗಿ ಹೊಸ ಗಿಡಗಳನ್ನು ನೆಟ್ಟು ಪೋಷಿಸಬೇಕು ಎಂದು ಹೆದ್ದಾರಿ ಪ್ರಾಧಿಕಾರಕ್ಕೆ ನಿರ್ದೇಶನ ನೀಡಿದರು. ಇದಕ್ಕೆ ಪ್ರತಿಕ್ರಿಯಿಸಿದ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳು ಸಕರಾತ್ಮಕವಾಗಿ ಸ್ಪಂದಿಸಿದರು.

ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಇ.ಬಾಲಕೃಷ್ಣ, ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಂಜುನಾಥ, ಡಿವೈಎಸ್ಪಿ ಪಿ.ಮುರಳೀಧರ, ಉಪ ವಿಭಾಗಾಧಿಕಾರಿ ವಿವೇಕಾನಂದ, ಪ್ರಾದೇಶಿಕ ಸಾರಿಗೆ ಅಧಿಕಾರಿ ದಾಮೋದರ ಹಾಗೂ ಗುತ್ತಿಗೆದಾರರು ಸೇರಿದಂತೆ ಜಿಲ್ಲಾ ಮಟ್ಟದ ಅಧಿಕಾರಿಗಳು ಇದ್ದರು.

ಕೊಪ್ಪಳ :ಮುಂಗಾರು ಆಂದೋಲನ ಕಾರ್ಯಕ್ರಮ



ಕೊಪ್ಪಳ ಜೂ.18-

ವಿಸ್ತರಣಾ ನಿರ್ದೇಶನಾಲಯ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ರಾಯಚೂರು, ವಿಸ್ತರಣಾ ನಿರ್ದೇಶಕರಾದ ಡಾ. ಎ.ಆರ್. ಕುರುಬರ ಅವರ ನಿರ್ದೇಶನದಂತೆ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಅಡಿಯಲ್ಲಿ ಬರುವ ಕೊಪ್ಪಳ ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರ, ಆತ್ಮ ಯೋಜನೆ ಕೃಷಿ ಇಲಾಖೆ, ಕೃಷಿಕ್ ಸಮಾಜ ಸಹಯೋಗದಲ್ಲಿ ಕೊಪ್ಪಳ ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರದಲ್ಲಿ ಬುಧವಾರ (ಜೂ. 17ರಂದು) ಮುಂಗಾರು ಆಂದೋಲನ ಎನ್ನುವ ವಿನೂತನ ಕಾರ್ಯಕ್ರಮ ಜರುಗಿತು.

ಕೊಪ್ಪಳ ಜಿಲ್ಲಾ ಕೃಷಿಕ ಸಮಾಜದ ಅಧ್ಯಕ್ಷರಾದ ಶೇಖರ ಗೌಡ ಮಾಲಿ ಪಾಟೀಲ್ ಅವರು ಕಾರ್ಯಕ್ರಮ ಉದ್ಘಾಟಿಸಿದರು. ಬಳಿಕ ಮಾತನಾಡಿ, ಇಂದಿನ ಬದಲಾದ ಪರಿಸ್ಥಿತಿಯಲ್ಲಿ, ಗೊಬ್ಬರಗಳ ಒಂದು ಕೊರತೆಯ ಸಂದರ್ಭದಲ್ಲಿ ರೈತರು ಸಾವಯವ ಕೃಷಿ ಮತ್ತು ನೈಸರ್ಗಿಕ ಕೃಷಿಯತ್ತ ಹಂತ ಹಂತವಾಗಿ ಹೆಜ್ಜೆ ಇಡುತ್ತ ಕೃಷಿಯನ್ನು ಮುಂದುವರಿಸಿಕೊಂಡು ಹೋಗಬೇಕಾಗಿದೆ.

ಈ ನಿಟ್ಟಿನಲ್ಲಿ ಕೃಷಿ ವಿಸ್ತರಣಾ ಕೇಂದ್ರದ ವಿಜ್ಞಾನಿಗಳು, ಕೃಷಿ ಇಲಾಖೆ ಮತ್ತು ಸಂಬಂಧ ಪಟ್ಟ ಎಲ್ಲ ಇಲಾಖೆಯ ಅಧಿಕಾರಿಗಳು ಕೈಜೋಡಿಸಿ ರೈತರಿಗೆ ಸೂಕ್ತ ಮಾರ್ಗದರ್ಶನ ನೀಡಬೇಕು ಮತ್ತು ರೈತರು ಅದರ ಸಧುಪಯೋಗ ಪಡೆದುಕೊಳ್ಳಬೇಕೆಂದು ಕರೆ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ಸ್ಥಾನ ವಹಿಸಿದ ಕೊಪ್ಪಳ ಕೃಷಿ ಇಲಾಖೆಯ ಜಂಟಿ ನಿರ್ದೇಶಕರಾದ ಜಿ.ಡಿ ಕೃಷ್ಣಮೂರ್ತಿ ಅವರು ಮಾತನಾಡಿ, ರೈತರು ಉತ್ತಮ ಬೀಜಗಳನ್ನು ಬಿತ್ತ ಬೇಕಲ್ಲದೆ, ಸಾವಯವ ಮತ್ತು ನೈಸರ್ಗಿಕ ಕೃಷಿಯತ್ತ ಗಮನಹರಿಸಿ ಹಂತ ಹಂತವಾಗಿ ತಮ್ಮ ಕುಟುಂಬ ಗೋಸ್ಕರವಾಗಿ ಯಾದರೂ ನೈಸರ್ಗಿಕ ಕೃಷಿ ಅನುಸರಿಸಲೇಬೇಕಾಗಿದೆ ಎಂದರು.

ಇದೇ ಸಂದರ್ಭದಲ್ಲಿ ಇಲಾಖೆಯಲ್ಲಿ ಲಭ್ಯವಿರುವ ಯೋಜನೆಗಳ ಬಗ್ಗೆ ಮಾಹಿತಿ ನೀಡಿದರಲ್ಲದೆ, ಬೆಂಬಲ ಬೆಲೆ ಎನ್ನುವುದು ಬೇಡಿಕೆ ಮೇಲೆ ಕೇಂದ್ರ, ಹಾಗೂ ರಾಜ್ಯ ಸರಕಾರ ನಿರ್ಧರಿಸುತ್ತವೆ ಎಂದು ರೈತರೊಬ್ಬರ ಪ್ರಶ್ನೆಗೆ ಉತ್ತರ ನೀಡಿದರು.

ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ವ್ಯವಸ್ಥಾಪನ ಮಂಡಳಿಯ ಸದಸ್ಯರಾದ ತಿಮ್ಮಣ್ಣ ಚವಡಿ ಅವರು ಮಾತನಾಡಿ, ರೈತರು ವಿಜ್ಞಾನಿಗಳ ಮಾರ್ಗದರ್ಶನದಲ್ಲಿ ಸಾವಯವ ಕೃಷಿ ಮತ್ತು ನೈಸರ್ಗಿಕ ಕೃಷಿಯನ್ನು ಕೈಗೊಳ್ಳಬೇಕು ಎಂದು ನುಡಿದರು. ಇದೇ ಸಂದರ್ಭದಲ್ಲಿ, ಮಹಿಳೆಯರು ಒಣ ಹಾಕಿದ ಬಟ್ಟೆ ಹಾರಿ ಹೋದಾಗತಮ್ಮ ಮನೆಗೆ ಮರಳಿ ತೆಗೆದುಕೊಂಡು ಬರುತ್ತಾರೋ ಹಾಗೆಯೇರೈತರುತಮ್ಮ ಹೊಲದಿಂದಕೊಚ್ಚಿ ಹೋಗುವ ಮಣ್ಣನ್ನು ಮರಳಿ ತಂದು ಭೂಮಿಯ ಫಲವತ್ತತೆ ಹಾಳಾಗದಂತೆ ನೋಡಿಕೊಳ್ಳಬೇ ಕೆಂದು ಮಾರ್ಮಿಕವಾಗಿ ನುಡಿದರು.

ಕೊಪ್ಪಳ ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರದ ವಿಸ್ತರಣಾ ಮುಂದಾಳು ಡಾ. ಬದರಿ ಪ್ರಸಾದ ಅವರು ಪ್ರಾಸ್ತಾ ವಿಕವಾಗಿ ಮಾತನಾಡಿ, ವಿಸ್ತರಣಾ ನಿರ್ದೇಶನಾಲಯ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ರಾಯಚೂರು,

ವಿಸ್ತರಣಾ ನಿರ್ದೇಶಕರಾದ ಡಾ. ಎ.ಆರ್. ಕುರುಬರ ಅವರ ನಿರ್ದೇ ಶನದಂತೆ ಕೊಪ್ಪಳ ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರದಲ್ಲಿಂದು ಮುಂಗಾರು ಆಂದೋಲನ ಎನ್ನುವ ವಿನೂತರ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ರೈತರು ನಿರಂತರವಾಗಿ ಇಲ್ಲಿ ನಡೆ ಯುವ ತರಬೇತಿಗಳ ಮೂಲಕ ಕೃಷಿ ಯಲ್ಲಿ ಹೆಚ್ಚಿನ ತಾಂತ್ರಿಕತೆ ಅಳವಡಿಸಿಕೊಂಡು ಲಾಭ ಪಡೆದುಕೊಳ್ಳಬೇಕು. ರೈತರು ಯಾವುದೇ ವಿಷಯದ ಬಗ್ಗೆ ಇಲ್ಲಿ ತರಬೇತಿ ಪಡೆದುಕೊಳ್ಳಬಹುದು ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ಇದೇ ತಿಂಗಳ ದಿನಾಂಕ 20 ರಂದು ಸಾವಯವ ಕೃಷಿ ಕುರಿತು ಶಿವಶಂಕರ್ ಕುರೇಶಿ, ಧಾರವಾಡರವರು ಶ್ರೀಪಾದ ಮುರುಡಿ, ಆಚಾರ್‌ತಿಮ್ಮಾಪುರವರ ಹೊಲದಲ್ಲಿ ವಿಶೇಷ ಉಪನ್ಯಾಸಕರಾಗಿ ಆಗಮಿಸುತ್ತಿದ್ದು ರೈತರು ಇದರ ಸದ್ವಿನಿಯೋಗ ಮಾಡಿಕೊಳ್ಳಬೇಕು.

ಅಲ್ಲದೇ ಜುಲೈ 5ನೇ ತಾರೀಕು ಶ್ರೀನಿವಾಸ್ ಜಾಲಿಹಾಳ್ ನೆಲಗಲ್ ಗ್ರಾಮ ರವರ ತೋಟದಲ್ಲಿ ಮಣ್ಣಿನೊಂದಿಗೆ ಮಾತುಕತೆ ಎಂಬ ವಿಶೇಷ ಕಾರ್ಯಕ್ರಮವನ್ನು ಏರ್ಪಡಿಸಲಾಗಿದ್ದು, ರೈತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ತಾಂತ್ರಿಕತೆಯನ್ನು ತಿಳಿದುಕೊಳ್ಳಬೇಕೆಂದು ಕರೆ ನೀಡಿದರು.

ಪ್ರಗತಿಪರ ರೈತರಾದ ಲಿಂಗಪ್ಪ, ಶ್ರೀನಿವಾಸ ಜಾಲಿಹಾಳ್, ಜಡೆ ಸ್ವಾಮಿ, ಬಸವರಾಜ ಗೊಂಡಬಾಳ ಅವರು ಸಾವಯವ ಕೃಷಿ ಕುರಿತು ತಮ್ಮ ಅನಿಸಿಕೆಗಳನ್ನು ಹಂಚಿಕೊಂಡರು.

ಕೊಪ್ಪಳ ಕೃಷಿಕ ಸಮಾಜದ ಉಪಾಧ್ಯಕ್ಷರಾದ ವಿರೂಪಣ್ಣ ನವೋದಯ ಹಾಗೂ ಎಫ್.ಪಿ.ಓ ರಾಜ್ಯ ನಿರ್ದೇಶಕರಾದ ಶಿವರಾಮರವರು ಕಾರ್ಯಕ್ರಮದಲ್ಲಿ ಮಾತನಾಡಿದರು.

ತಾಂತ್ರಿಕ ಗೋಷ್ಠಿಯಲ್ಲಿ ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಬೇಸಾಯ ಶಾಸ್ತ್ರ ವಿಭಾಗದ ಡಾ. ರಾಘವೇಂದ್ರ ಅವರು ಗೋಡಂಬಿ ಬೇಸಾಯದ ಕುರಿತು ಉಪನ್ಯಾಸ ನೀಡಿದರು. ಕೋರಮಂಡಲ ಕಂಪನಿಯ ಪ್ರತಿನಿಧಿ ಡಾ. ಅವಿನಾಶ ಅವರು ರಾಸಾಯನಿಕ ಗೊಬ್ಬರಗಳು ಮತ್ತು ನ್ಯಾನೋ ಗೊಬ್ಬರಗಳ ಬಗ್ಗೆ ತಾಂತ್ರಿಕ ಉಪನ್ಯಾಸ ನೀಡಿದರು.

ಕಾರ್ಯಕ್ರಮದಲ್ಲಿ ಕೃಷಿಕ ಸಮಾಜದ ಎಲ್ಲ ತಾಲೂಕಿನ ಅಧ್ಯಕ್ಷರು, ಕೃಷಿ ಸಂಬಂಧಿತ ಎಲ್ಲಾ ಇಲಾಖೆಯ ಅಧಿಕಾರಿಗಳು ಮತ್ತು ಲೀಡ್ ಬ್ಯಾಂಕ್ ವ್ಯವಸ್ಥಾಪಕರು, ಅಲ್ಲದೆ 130ಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ರೈತರು ಮತ್ತು ರೈತ ಮಹಿಳೆಯರು ಉಪಸ್ಥಿತರಿದ್ದರು.

ಕೊಪ್ಪಳ ಜಿಲ್ಲೆಯ ಇತಿಹಾಸದಲ್ಲೇ ಒಂದು ಸುವರ್ಣ ದಾಖಲೆಯಾದ ರಾಜ್ಯ ಮಟ್ಟದ ಚದುರಂಗ ಪಂದ್ಯಾವಳಿ



ಕೊಪ್ಪಳ ಜೂ.18-

ವಿಶ್ವ ಚೆಸ್ ಅಕಾಡೆಮಿ(ರಿ) ಕೊಪ್ಪಳ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಕೊಪ್ಪಳ ಇವರ ಸಂಯುಕ್ತಾಶ್ರಯದಲ್ಲಿ ಇತ್ತೀಚೆಗೆ (ಜೂ. 14ರಂದು) ಕೊಪ್ಪಳ ಜಿಲ್ಲಾ ಕ್ರೀಡಾಂಗಣದಲ್ಲಿ ಹಮ್ಮಿಕೊಂಡಿದ್ದ 2ನೇ ರಾಜ್ಯ ಮಟ್ಟದ ಚದುರಂಗ ಪಂದ್ಯಾವಳಿ-2026 ಹಾಗೂ ವಿಶ್ವ ರಾಯಲ್ ಚೆಸ್ ಅರಿನ-2026 ಸಭೆ ಯಶಸ್ವಿಯಾಗಿ ನಡೆಯಿತು.

ಈ ಪಂದ್ಯಾವಳಿಯಲ್ಲಿ ರಾಜ್ಯದಿಂದ ಸುಮಾರು 170 ಸ್ಪರ್ಧಾಳುಗಳು ಭಾಗವಹಿಸಿದ್ದು, ವಿಶೇಷವಾಗಿ ರಾಜ್ಯಾದ್ಯಂತ ಬಂದಿದ್ದ ಸುಮಾರು 30 ರೇಟೆಡ್ ಆಟಗಾರರು ಈ ಪಂದ್ಯಾವಳಿಯಲ್ಲಿ ಪಾಲ್ಗೊಳ್ಳುವ ಮೂಲಕ ಕೊಪ್ಪಳ ಜಿಲ್ಲೆಯ ಇತಿಹಾಸದಲ್ಲೇ ಒಂದು ಸುವರ್ಣ ದಾಖಲೆಯಾಗಿದೆ. ಕರ್ನಾಟಕದ ವಿವಿಧ ಜಿಲ್ಲೆಗಳಷ್ಟೇ ಅಲ್ಲದೇ ನೆರೆಯ ಆಂಧ್ರಪ್ರದೇಶದಿಂದಲೂ ಸಹ ಆಟಗಾರರು ಆಗಮಿಸಿ, ಈ ಪಂದ್ಯಾವಳಿಯ ಹಿರಿಮೆಯನ್ನು ಹೆಚ್ಚಿಸಿದ್ದರು. ವಿಜೇತ ಆಟಗಾರರಿಗೆ ಒಟ್ಟಾರೆಯಾಗಿ 40 ಬಹುಮಾನಗಳನ್ನು ವಿತರಿಸಲಾಯಿತು.

ಚದುರಂಗ ಆಟದ ಉದ್ಘಾಟನಾ ಹಾಗೂ ಸಮಾರೋಪ ಸಮಾರಂಭಕ್ಕೆ ಹಲವು ಪ್ರಮುಖ ಗಣ್ಯರು ಆಗಮಿಸಿ ಆಟಗಾರರನ್ನು ಪ್ರೋತ್ಸಾ ಹಿಸಿದರು. ಶ್ರೀ ಗವಿಸಿದ್ದೇಶ್ವರ ಬಿಸರಳ್ಳಿ ಶಾಖಾ ಮಠದ ಪರಮ ಪೂಜ್ಯ ಶ್ರೀ ಶಿವಶಾಂತವೀರ ಸ್ವಾಮೀಜಿಗಳು ಬಹುಮಾನ ವಿತರಣಾ ಸಮಾರಂಭದ ದಿವ್ಯಸಾನಿಧ್ಯ ವಹಿಸಿದ್ದರು.

ಈ ಸಂದರ್ಭದಲ್ಲಿ ಕೊಪ್ಪಳ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರಾದ ವಿಠ್ಠಲ್ ಜಾಬಗೌಡರ್, ವಿಶ್ವ ಚೆಸ್ ಅಕಾಡೆಮಿಯ ಅಧ್ಯಕ್ಷರಾದ ರಾಮಸ್ವರೂಪ್ ಕಾಂಬ್ಳೇಕರ್, ಐ.ಎ ಪ್ರಮೋದ ಮೋರೆ, ಕಾವ್ಯಾ ಪ್ರಸನ್ನ ಗಡಾದ, ನಿತಿನ್ ಕರ್ಪೂರ್, ಡಾ. ಗಿರೀಶ್ ಹಿರೇಮಠ, ಡಾ. ಪ್ರಶಾಂತ್ ಸುಶೀಲ್ ಕಲಾಲ್ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ವಿಶೇಷ ಕೃತಜ್ಞತೆಗಳು: ರಾಜ್ಯ ಮಟ್ಟದ ಚದುರಂಗ ಪಂದ್ಯಾವಳಿಯ ಯಶಸ್ವಿ ಹಿನ್ನೆಲೆಯಲ್ಲಿ ಈ ಕಾರ್ಯಕ್ರಮದಲ್ಲಿ ನೀಡಿದ ಅಮೂಲ್ಯವಾದ ಬೆಂಬಲವನ್ನು ಹಾಗೂ ಸಹಕಾರಕ್ಕಾಗಿ ಜಿಲ್ಲಾ ಯುವ ಸಬಲೀಕರಣ ಮತ್ತು ಕ್ರೀಡಾಧಿಕಾರಿಗಳಾದ ವಿಠ್ಠಲ್ ಜಾಬಗೌಡರ್ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಿಬ್ಬಂದಿಗಳು ಮತ್ತು ಕೀರ್ತಿವರ್ಧನ್ ಹಾಗೂ ವಿಮಲ್‌ರಾಜ್ ಅವರಿಗೆ ಶ್ರೀರಾಮಸ್ವರೂಪ್ ಕಾಂಬ್ಳೇಕರ್ ಅವರು ವಿಶೇಷ ಧನ್ಯವಾದಗಳನ್ನು ತಿಳಿಸಿದರು.

ವಿಜೇತರ ವಿವರ: ಓಪನ್ ಕೆಟಗರಿಯಲ್ಲಿ ನಂದಕುಮಾರ್ ಅವರು ಪ್ರಥಮ ಸ್ಥಾನ ಪಡೆದರೆ, ಸಂಗಪ್ಪ ಎಸ್. ದ್ವಿತಿಯ, ಪ್ರಹ್ಲಾದ ಎಸ್. ತೃತೀಯ, ನಾಗರಾಜ್ ಕುಲಕರ್ಣಿ ಚತುರ್ಥ, ನಂದಕೀಶೋರ್ ಎಸ್. ಅವರು ಪಂಚಮ ಸ್ಥಾನ ಪಡೆದುಕೊಂಡರು. ವಿಶೇಷ ಕೆಟಗರಿಯಲ್ಲಿ ಸೀನಿಯರ್ 50+ ಕೆಟಗರಿಯಲ್ಲಿ ಶಿವಕುಮಾರ ಡಿ. ಹಾಗೂ ಸ್ಥಳೀಯ ಕೆಟಗರಿಯಲ್ಲಿ ಶರಣ ಕತ್ತಿ ಮತ್ತು ಮಹಿಳೆಯರ ಕೆಟಗರಿಯಲ್ಲಿ ವಿಜಯಲಕ್ಷ್ಮಿ ಅವರು ಪ್ರಥಮ ಸ್ಥಾನವನ್ನು ಪಡೆದುಕೊಂಡರು.

ಅದೇ ರೀತಿ ವಿಶ್ವ ಚೆಸ್ ಅಕಾಡೆಮಿ ಕೆಟಗರಿಯಲ್ಲಿ ದಿವ್ಯಾ ಕಾಂಬ್ಳೇಕರ್ ಪ್ರಥಮ ಸ್ಥಾನ ಪಡೆದುಕೊಂಡರೆ, ಅಂಡರ್ 16 ಬಾಲಕರ ಕೆಟಗರಿಯಲ್ಲಿ ಆದಿತ್ಯ ಹರಿದಾಸ್, ಅಂಡರ್ 16 ಬಾಲಕಿಯರ ಕೆಟಗರಿಯಲ್ಲಿ ಸಿಂಚನಾ ಗಿರೀಶ್, ಅಂಡರ್ 13 ಬಾಲಕರ ಕೆಟಗರಿಯಲ್ಲಿ ಸಾತ್ವಿಕ್ ಎಸ್. ಹಾಗೂ ಅಂಡರ್ 13 ಬಾಲಕಿಯರ ಕೆಟಗರಿಯಲ್ಲಿ ಯಶ್ವಿ ರಾವಲ್, ಅಂಡರ್ 10 ಬಾಲಕರ ಕೆಟಗರಿಯಲ್ಲಿ ವಿಹಾನ್ ಭದ್ರಾವತಿ ಮತ್ತು ಅಂಡರ್ 10 ಬಾಲಕಿಯರ ಕೆಟಗರಿಯಲ್ಲಿ ಪಾಮ್ಡಿ ಶೇಖ್ ಅಂಜುಮ್ ಅವರು ಪ್ರಥಮ ಸ್ಥಾನ ಪಡೆದರು. ವಿಶೇಷವಾಗಿ ಮೂರು ವರ್ಷದ ಕಿರಿಯ ಆಟಗಾರ್ತಿ ಕಾಜಾಸ್ವಕ್ಷ ಮತ್ತು ಶ್ರೀನಿರ್ವಿ ಅವರಿಗೆ ಯಂಗೆಸ್ಟ್ ಪ್ಲೇಯರ್ ವಿಶೇಷ ಪ್ರಶಸ್ತಿ ನೀಡಿ ಗೌರವಿಸಲಾಯಿತು.



ಕುರುಗೋಡಿನಲ್ಲಿ ವಿಶ್ವ ಬಾಲಕಾರ್ಮಿಕ ಪದ್ಧತಿ ವಿರೋಧಿ ದಿನಾಚರಣೆ: ಜಾಗೃತಿ ಜಾಥಾ, ಉದ್ದಿಮೆಗಳ ಮೇಲೆ ದಾಳಿ - ಬಾಲಕನ ರಕ್ಷಣೆ

ಬಳ್ಳಾರಿ,ಜೂ.18-

ಜಿಲ್ಲಾಧಿಕಾರಿಯವರ ನಿರ್ದೇಶನದ ಮೇರೆಗೆ ಕುರುಗೋಡು ತಾಲೂಕು ಮಟ್ಟದಲ್ಲಿ ವಿಶ್ವ ಬಾಲ ಕಾರ್ಮಿಕ ಪದ್ಧತಿ ವಿರೋಧಿ ದಿನಾಚರಣೆ ಅಂಗವಾಗಿ ಶಾಲಾ ಮಕ್ಕಳಿಂದ ಬೃಹತ್ ಜಾಗೃತಿ ಜಾಥಾ ಮತ್ತು ವೇದಿಕೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಕುರುಗೋಡು ಪಟ್ಟಣದ ಪ್ರಮುಖ ರಸ್ತೆಗಳಲ್ಲಿ ಹಮ್ಮಿಕೊಳ್ಳಲಾಗಿದ್ದ ಶಾಲಾ ಮಕ್ಕಳ ಜಾಗೃತಿ ಜಾಥಾ ಕಾರ್ಯಕ್ರಮಕ್ಕೆ ಗ್ರೇಡ್-2 ತಹಶೀಲ್ದಾರ ಮಲ್ಲೇಶಪ್ಪ ಅವರು ಹಸಿರು ನಿಶಾನೆ ತೋರುವುದರ ಮೂಲಕ ಚಾಲನೆ ನೀಡಿದರು. ಜಾಥಾದ ನಂತರ ಹಮ್ಮಿಕೊಳ್ಳಲಾಗಿದ್ದ ವೇದಿಕೆ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡಿದ ತಾಪಂ ಸಹಾಯಕ ನಿರ್ದೇಶಕ ಶಿವರಾಮ ರೆಡ್ಡಿ ಅವರು, ಮಕ್ಕಳು ಸಮಾಜಮುಖಿ ಕಾರ್ಯಕ್ರ ಮಗಳಲ್ಲಿ ಭಾಗವಹಿಸುವುದರ ಜೊತೆಗೆ ತಮ್ಮಲ್ಲಿರುವ ಸುಪ್ತ ಪ್ರತಿಭೆಗಳನ್ನು ಪ್ರದರ್ಶಿಸಬೇಕು. ವಿದ್ಯಾರ್ಥಿಗಳು ಇದರ ಸದುಪಯೋಗ ಪಡೆದುಕೊಂಡು ತಮ್ಮ ಜೀವನವನ್ನು ಉತ್ತಮಪಡಿಸಿಕೊಳ್ಳಬೇಕು ಎಂದು ಕರೆ ನೀಡಿದರು.

ಕಾರ್ಮಿಕ ನಿರೀಕ್ಷಕ ಪರಶುರಾಮ್ ಅವರು ಮಾತನಾಡಿ, ಕುರುಗೋಡು ತಾಲೂಕಿನಲ್ಲಿ ಎಲ್ಲಾದರೂ ಶಾಲೆ ಬಿಟ್ಟ ಮಕ್ಕಳು ಅಥವಾ ಬಾಲಕಾರ್ಮಿಕರಾಗಿ ದುಡಿಯುತ್ತಿರುವ ಮಕ್ಕಳು ಕಂಡುಬಂದಲ್ಲಿ ತಕ್ಷಣವೇ 1098 ಉಚಿತ ಸಹಾಯವಾಣಿಗೆ ಮಾಹಿತಿ ನೀಡಬೇಕು. ಇದರಿಂದ ಅಂತಹ ಮಕ್ಕಳನ್ನು ರಕ್ಷಿಸಿ, ಅವರಿಗೆ ಮರುಶಿಕ್ಷಣ ನೀಡಿ ಮುಖ್ಯವಾಹಿನಿಗೆ ತರಲು ಅನುಕೂಲವಾಗುತ್ತದೆ ಎಂದು ತಿಳಿಸಿದರು. ಇದೇ ವೇಳೆ ಜಿಲ್ಲಾ ಬಾಲ ಕಾರ್ಮಿಕ ಯೋಜನೆಯ ಯೋಜನಾ ನಿರ್ದೇಶಕ ಎ. ಮೌನೇಶ್ ಅವರು ವಿಶ್ವ ಬಾಲಕಾರ್ಮಿಕ ಪದ್ಧತಿ ಆಚರಣೆಯ ಮಹತ್ವದ ಕುರಿತು ಪ್ರಾಸ್ತಾವಿಕವಾಗಿ ಮಾತನಾಡಿದರು. ಉದ್ದಿಮೆಗಳ ಮೇಲೆ ಆಕಸ್ಮಿಕ ದಾಳಿ: ಬಾಲಕನ ರಕ್ಷಣೆ ದಿನಾಚರಣೆಯ ಅಂಗವಾಗಿ ಪಟ್ಟಣದ ಪ್ರಮುಖ ಬೀದಿಗಳಲ್ಲಿದ್ದ ಉದ್ದಿಮೆಗಳ ಮೇಲೆ ಅಧಿಕಾರಿಗಳ ತಂಡ ಆಕಸ್ಮಿಕ ದಾಳಿ ನಡೆಸಿತು. ಈ ವೇಳೆ ಸ್ಥಳೀಯ 'ದಾದಾ ವರ್ಕ್‌ಶಾಪ್'ನಲ್ಲಿ ಬಾಲಕನೊಬ್ಬ ಕೆಲಸ ಮಾಡುತ್ತಿರು ವುದು ಪತ್ತೆಯಾಗಿದ್ದು, ಅಧಿಕಾರಿಗಳು ತಕ್ಷಣವೇ ಮಗುವನ್ನು ರಕ್ಷಿಸಿದ್ದಾರೆ. ರಕ್ಷಿಸಲ್ಪಟ್ಟ ಬಾಲಕನನ್ನು ಮುಷ್ಟಗಟ್ಟೆ ಗ್ರಾಮದಲ್ಲಿರುವ ಮೊರಾರ್ಜಿ ವಸತಿ ಶಾಲೆಗೆ ದಾಖಲಿಸಿ, ಶಿಕ್ಷಣ ಮುಂದುವರಿಸಲು ಕ್ರಮ ಕೈಗೊಳ್ಳಲಾಗಿದೆ.

ಒಂದನೇಯ ಪುಟದಿಂದ

ಮೊಹರಂ ಹಬ್ಬದ ಜಿಲ್ಲಾ ಮಟ್ಟದ ಶಾಂತಿ ಪಾಲನಾ ಸಭೆ

ಮೊಹರಂ ಹಬ್ಬವನ್ನು ಶಾಂತಿ, ಸೌಹಾರ್ದದಿಂದ ಆಚರಿಸಿ: ಜಿಲ್ಲಾಧಿಕಾರಿ ಪೂವಿತಾ

ಉತ್ಸವ ಕಾಲಕ್ಕೆ ಸುಮಾರು 1.25 ಲಕ್ಷ ಜನ ಸೇರುವ ಸಾಧ್ಯತೆ ಇರುತ್ತದೆ ಎಂದರು.

ಈ ಹಿಂದೆ ರಾಯಚೂರು ಜಿಲ್ಲೆಯಲ್ಲಿ ವಿವಿಧ ಕಾರಣಗಳಿಗಾಗಿ ಮೊಹರಂ ಆಚರಿಸುವ ಕಾಲಕ್ಕೆ ಗಲಾಟೆ-ಗದ್ದಲಗಳಾದ ಪ್ರಯುಕ್ತ ಪ್ರಸ್ತುತ ಸಾಲಿನಲ್ಲಿ ತಾಲೂಕ ಕೇಂದ್ರ ಸಿರವಾರ ಪಟ್ಟಣ ಸೇರಿದಂತೆ ಜಿಲ್ಲೆಯ ಒಟ್ಟು 29 ಗ್ರಾಮಗಳಲ್ಲಿ ಮೊಹರಂ ಹಬ್ಬದ ಆಚರಣೆಯನ್ನು ಜಿಲ್ಲಾ ಪೊಲೀಸ್ ಇಲಾಖೆಯ ಪ್ರಸ್ತಾವನೆಯ ಮೇರೆಗೆ ಜಿಲ್ಲಾಧಿಕಾರಿಗಳು ನಿಷೇಧಿಸಿ ಆದೇಶ ಹೊರಡಿಸಿರುತ್ತಾರೆ ಎಂದರು.

ಮೊಹರಂ ಹಬ್ಬದ ಆಚರಣೆಯು ರಾತ್ರಿ ವೇಳೆಯಲ್ಲಿ ನಡೆಯುತ್ತದೆ. ಈ ವೇಳೆಯಲ್ಲಿ ಯಾವುದೇ ದುರ್ಘಟನೆ ನಡೆಯದಂತೆ ನೋಡಿಕೊಳ್ಳಬೇಕು. ಅಗ್ನಿ ಕುಂಡದ ಎತ್ತರವನ್ನು ಕಡಿಮೆ ಮಾಡಬೇಕು. ಅಗ್ನಿ ಅವಘಡ ಸಂಭವಿಸಿದ ಸಮಯದಲ್ಲಿ ಆ ವ್ಯಕ್ತಿಗೆ ನೀರನ್ನು ಹಾಕಬಾರದು. ಮೊಹರಂ ಹಬ್ಬದಲ್ಲಿ ಯಾರ ಮೇಲೆಯೂ ದೈಹಿಕ ಹಲ್ಲೆ ಮಾಡಬಾರದು. ಮದ್ಯ ಮಾರಾಟ ನಿಷೇಧ ಮಾಡಬೇಕು. ಕಂದಾಯ ಅಧಿಕಾರಿಗಳು, ಪಿಡಿಒಗಳ ಸೇರಿದಂತೆ ಸಂಬಧಿಸಿದ ಇಲಾಖೆಯ ಅಧಿಕಾರಿಗಳು ಕಾಲಕಾಲಕ್ಕೆ ಸ್ಥಳಕ್ಕೆ ಭೇಟಿ ನೀಡಬೇಕು. ಮೊಹರಂ ಹಬ್ಬದ ಕುರಿತು ಸರಿಯಾದ ಮಾಹಿತಿ ಪಡೆಯಬೇಕು. ಅಲ್ಲದೆ ಸಿಸಿಟಿವಿಗಳನ್ನು ಅಳವಡಿಸಬೇಕು. ಮಿನಿ ಪೋಕಸ್ ಲೈಟ್ ವ್ಯವಸ್ಥೆ ಮಾಡಬೇಕು. ಜೊತೆಗೆ ಅಗ್ನಿ ಕುಂಡದ ಸುತ್ತಲೂ ಕಟ್ಟಿಗೆ ಕಂಬಗಳನ್ನು ನೆಡಲು ಅಗತ್ಯ ಕ್ರಮ ವಹಿಸಬೇಕು. ಅಲ್ಲದೆ ಎಲ್ಲಾ ಸಮಿತಿಗಳ ಮುಖಂಡರು ಪೊಲೀಸ್ ಇಲಾಖೆಯ ಮಾರ್ಗಸೂಚಿಗಳನ್ನು ಪಾಲಿಸಬೇಕು ಎಂದರು.

ಸಾರ್ವಜನಿಕರ ಸಲಹೆ: ಜಿಲ್ಲೆಯ ಜಿಲ್ಲಾಡಳಿತ, ಪೊಲೀಸ್ ಇಲಾಖೆಯೊಂದಿಗೆ ಸಾರ್ವಜನಿಕರರು ಕೈಜೋಡಿಸಬೇಕು. ಜಿಲ್ಲೆಯಲ್ಲಿ ಯಾವುದೇ ಅವಘಡ ನಡೆಯದಂತೆ ವಿವಿಧ ಇಲಾಖೆಗಳು ಮುನ್ನಚೇರಿಕೆ ವಹಿಸಬೇಕು ಎಂದು ರಾಯಚೂರಿನ ಶ್ರೀನಿವಾಸ್ ಪತ್ತಂಗಿ ಅವರು ಹೇಳಿದರು.

ಮೊಹರಂ ಹಬ್ಬದ ಆಚರಣೆಯ ಪ್ರಮುಖ ಸ್ಥಳಗಳಲ್ಲಿ ಆರೋಗ್ಯ ಇಲಾಖೆಯ ಅಧಿಕಾರಿಗಳು, ಅಗ್ನಿ ಶಾಮಕದಳದ ಸಿಬ್ಬಂದಿಗಳು ಹೆಚ್ಚಿನ ಪ್ರಮಾಣದಲ್ಲಿ ನಿಯೋಜನೆ ಮಾಡಬೇಕು. ಸರ್ಕಾರದ ವತಿಯಿಂದ ಮೊಹರಂ ಆಚರಣೆಯ ಸ್ಥಳಗಳಲ್ಲಿ ಒಂದು ಜನರೇಟರ್ ವ್ಯವಸ್ಥೆ ಮಾಡಬೇಕು. ಸಾಮಾಜಿಕ ಜಾಲತಾಣಗಳ ಮೇಲೆ ನಿಗಾ ವಹಿಸಬೇಕು. ಜಿಲ್ಲಾ ಪೊಲೀಸ್ ಇಲಾಖೆಯು ಉತ್ತಮವಾಗಿ ಕಾರ್ಯ ನಿರ್ವಹಣೆ ಮಾಡುತ್ತಿದೆ ಎಂದು ರಾಯಚೂರಿನ ಖಾಜಾ ಹುಸೇನ್ ಅವರು ಹೇಳಿದರು.

ಜಿಲ್ಲೆಯಲ್ಲಿ ಹಿಂದೂ, ಮುಸ್ಲಿಮರು ಸಹೋದರರ ರೀತಿಯಲ್ಲಿ ಮೊಹರಂ ಹಬ್ಬವನ್ನು ಪ್ರತಿವರ್ಷವು ಆಚರಣೆ ಮಾಡಿಕೊಂಡು ಬರಲಾಗುತ್ತಿದೆ. ಈ ವರ್ಷವು ಯಾವುದೇ ದುರ್ಘಟನೆಗೆ ಅವಕಾಶ ನೀಡದಂತೆ ಮೊಹರಂ ಹಬ್ಬವನ್ನು ಆಚರಣೆ ಮಾಡಬೇಕು. ಪೊಲೀಸ್ ಇಲಾಖೆಯ ಮಾರ್ಗಸೂಚಿಗಳನ್ನು ಎಲ್ಲರೂ ಪಾಲಿಸಲಾಗುತ್ತದೆ ಎಂದು ರಸುಲ್ ಸಾಬ್ ಅವರು ಹೇಳಿದರು.

ಎಲ್ಲಾ ಸಮಾಜದವರು ಮೊಹರಂ ಹಬ್ಬವನ್ನು ಶಾಂತಿಯುತವಾಗಿ ಆಚರಣೆ ಮಾಡಬೇಕು. ಶಕ್ತಿನಗರದಲ್ಲಿ ಕೂಡ ಪೊಲೀಸ್ ಇಲಾಖೆಯಿಂದ ಶಾಂತಿ ಸಭೆಯನ್ನು ಮಾಡಲಾಗಿದೆ ಎಂದು ಶಕ್ತಿನಗರದ ಸೂಗಪ್ಪ ಅವರು ಹೇಳಿದರು.

ರಾಯಚೂರು ವಿಭಾಗದ ಸಹಾಯಕ ಆಯುಕ್ತ ಡಾ.ಹಂಪಣ್ಣ ಸಜ್ಜನ್, ಜಿಲ್ಲಾ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಹರೀಶ್ ಜೆ., ಅಗ್ನಿ ಶಾಮಕದಳ ಅಧಿಕಾರಿ ರವೀಂದ್ರ ಅವರು ಸಭೆಯಲ್ಲಿ ಮಾತನಾಡಿದರು.

ಇದೇ ಸಂದರ್ಭದಲ್ಲಿ ರಾಯಚೂರು ಡಿವೈಎಸ್ಪಿ ಪರಮಾನಂದ ಘೋಡಕೆ, ಸಿಪಿಐ ನಿಂಗಯ್ಯ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿ, ಜಿಲ್ಲೆಯ ವಿವಿಧ ತಾಲೂಕುಗಳಿಂದ ಆಗಮಿಸಿದ ಹಿಂದೂ ಹಾಗೂ ಮುಸ್ಲಿಂ ಸಮಾಜದ ಮುಖಂಡರು ಸೇರಿದಂತೆ ಇತರರು ಉಪಸ್ಥಿತರಿದ್ದರು.

ಮೊಹರಂ ಹಬ್ಬದ ಜಿಲ್ಲಾ ಮಟ್ಟದ ಶಾಂತಿ ಪಾಲನಾ ಸಭೆ

ಮೊಹರಂ ಹಬ್ಬವನ್ನು ಶಾಂತಿ, ಸೌಹಾರ್ದದಿಂದ ಆಚರಿಸಿ: ಜಿಲ್ಲಾಧಿಕಾರಿ ಪೂವಿತಾ

ಈ ದೂರಿನ ಅನ್ವಯ ಅಪರಾಧ ಸಂಖ್ಯೆ: 117/2026 ಕಲಂ ಅಡಿಯಲ್ಲಿ 329(4) ಹಾಗೂ 324 (3), (4) ರ ಬಿಎನ್.ಎಸ್.ಪ್ರಕಾರ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿರುವದಾಗಿ ಗ್ರಾಮೀಣ ಠಾಣೆಯ ಎಎಸ್ಐ ಶಿವರುದ್ರಗೌಡ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಚಿನ್ನದ ಉತ್ಪಾದನೆಯ ಹಿಂದೆ ಕಾರ್ಮಿಕರ ಬೆವರು ನ್ಯಾಯಯುತ ಹಕ್ಕುಗಳಿಗೆ ಹೋರಾಟ ಅನಿವಾರ್ಯ-ಮೀನಾಕ್ಷಿ ಸುಂದರಂ

ನಮ್ಮ ಸೌಮ್ಯ ಭಾಷೆ ಆಡಳಿತಕ್ಕೆ ಅರ್ಥವಾಗಿಲ್ಲ. ನಾವು ಶಾಂತಿಯುತವಾಗಿ ಮಾತುಕತೆಗೆ ಆಹ್ವಾನ ನೀಡಿದ್ದೇವೆ.ಆದರೆ ಕಾರ್ಮಿಕರ ಧ್ವನಿಯನ್ನು ನಿರ್ಲಕ್ಷಿಸಿದರೆ ಮುಂದಿನ ದಿನಗಳಲ್ಲಿ ಹೋರಾಟದ ಸ್ವರೂಪ ಬದಲಾಗಲಿದೆ.ಕಾರ್ಮಿಕರ ಬೇಡಿಕೆಗಳನ್ನು ಈಡೇರಿಸುವ ಬದಲು ನಿರ್ಲಕ್ಷ್ಯ ಮುಂದುವರಿದರೆ ಅದರ ಸಂಪೂರ್ಣ ಹೊಣೆ ಆಡಳಿತದ ಮೇಲಿದೆಎಂದು ಎಚ್ಚರಿಕೆ ನೀಡಿದರು.

ನಾವು ಐಕ್ಯತೆಯಿಂದ ಈ ಹೋರಾಟವನ್ನು ಗೆಲ್ಲಬೇಕಿದೆ. ದುಡಿಮೆಗೆ ತಕ್ಕ ಪ್ರತಿಫಲ ಸಮಯಕ್ಕೆ ಸಿಗಬೇಕು. ಮೆಡಿಕಲ್ ಅನ್‌ಫಿಟ್ ಯೋಜನೆ,ಹೊಸ ವೇತನ ಒಪ್ಪಂದ ಸೇರಿದಂತೆ ಎಲ್ಲಾ ದೀರ್ಘಕಾಲದ ಬೇಡಿಕೆಗಳನ್ನು ಕೂಡಲೇ ಈಡೇರಿಸಬೇಕು ಎಂದು ಆಗ್ರಹಿಸಿದರು.

ಈ ಸಂದರ್ಭದಲ್ಲಿ ಸಂಘದ ಅಧ್ಯಕ್ಷ ಕೆ.ಮಮಹಾಂತೇಶ, ಪ್ರಧಾನ ಕಾರ್ಯದರ್ಶಿ ಎಸ್.ಎಂ.ಶಫಿ.ಉಪಾಧ್ಯಕ್ಷ ಚಂದ್ರಶೇಖರ್ ಆನ್ವರಿ, ಕಾರ್ಯದರ್ಶಿಗಳಾದ ವೆಂಕೋಬ್ ಮಿಯ್ಯಾಪೂರು, ಗೌಸ್ ಮಿಯಾ,ಜಮದಗ್ನಿ, ರಮೇಶ ಬಾಬು,ನಾಗರಾಜ್, ಹನೀಫ್,ಸಿದ್ದಪ್ಪ ಮುಂಡರಗಿ, ಚಂದ್ರಶೇಖರ್ ನೆಲೋಗಿ, ಕಾರ್ಯಕಾರಿ ಸಮಿತಿ ಸದಸ್ಯರಾದ ಬಾಬು ಸಾಗ್ರ, ಮುನೀರುದ್ದೀನ್, ಹನುಮಂತಗೌಡ, ಗುಂಡಪ್ಪಗೌಡ,ಮೌನೇಶ, ಗ್ಯಾನಪ್ಪ, ಕುಪ್ಪಣ್ಣ, ಸಿಐಟಿಯು ಜಿಲ್ಲಾ ಸಮಿತಿ ಜಂಟಿ ಕಾರ್ಯದರ್ಶಿ ರಮೇಶ ವೀರಾಪೂರು,ಮೈನುದ್ದೀನ್, ಎಐಟಿಯುಸಿ ಮುಖಂಡ ಸಂಗಯ್ಯಸ್ವಾಮಿ,ಸಿಐಟಿಯು ಮುಖಂಡರಾದ ಫಕ್ರುದ್ದೀನ್, ಪೆಂಚಲಯ್ಯ,ಸೋಮಣ್ಣ ನಾಯಕ್,ರಾಜೇಶ್ವರಿ, ಅಲ್ಲಾಭಕ್ಷ,ಮಹಮ್ಮದ್, ಖಾಜಾ,ರಫಿ,ಬಸವರಾಜ್ ನಗನೂರು,ಯಮುನಪ್ಪ, ನೋವಾ, ಶೇಖ್ ಬಡೆ, ಶ್ರೀದರ,ಯಮನೂರು, ಡಿ.ವೈ.ನಿಂಗರಾಜ್,ಸೇರಿದಂತೆ ಅನೇಕ ಸಂಘಟನೆಗಳ ಮುಖಂಡರು, ಕಾರ್ಯಕರ್ತರು ಮತ್ತು ಕಾರ್ಮಿಕರು ಉಪಸ್ಥಿತರಿದ್ದರು.

ಭಾರತೀಯ ರೈಲ್ವೆ - ದಿವ್ಯಾಂಗಜನ ರಿಯಾಯಿತಿ ಕಾರ್ಡ್ ಆನ್ಲೈನ್‌ನಲ್ಲಿ ಲಭ್ಯ

ಟಿಕೆಟ್ನಲ್ಲಿ ರಿಯಾಯಿತಿ ಪಡೆಯಲು ಅರ್ಹರಾದ ದಿವ್ಯಾಂಗಜನ ಪ್ರಯಾಣಿಕರು ಆನ್ಲೈನ್ ಅರ್ಜಿ ಸಲ್ಲಿಸಲು ವೆಬ್ಸೈಟ್: ://... ನಲ್ಲಿ ಅರ್ಜಿ ಸಲ್ಲಿಸಬಹುದಾಗಿದೆ.

ಭಾರತ ಸರಕಾರದ ನೈಋತ್ಯ ರೈಲ್ವೆ ದಿವ್ಯಾಂಗಜನರಿಗೆ ಈಗ ಸಿಹಿ ಸುದ್ದಿ ನೀಡಿದ್ದು ಕರ್ನಾಟಕವು ನೈಋತ್ಯ ರೈಲ್ವೆ ವಲಯದ ಅಡಿಯಲ್ಲಿ ಬರುತ್ತದೆ. ಅರ್ಜಿ ಸಲ್ಲಿಸಲು ಸಾಮಾನ್ಯವಾಗಿ ಆಧಾರ್, ಅಂಗವೈಕಲ್ಯ ಪ್ರಮಾಣಪತ್ರ, ಫೋಟೋ ಮತ್ತು ಹಳೆಯ ಕಾರ್ಡ್ ಬೇಕಾಗುತ್ತದೆ.

ಸೌಲಭ್ಯಗಳು:

1. ರೈಲ್ವೆ ಕಚೇರಿಗೆ ಭೇಟಿ ನೀಡುವ ಅಗತ್ಯವಿಲ್ಲ
2. ಹೊಸ ಕಾರ್ಡ್ / ನವೀಕರಣಕ್ಕಾಗಿ ಮನೆಯಿಂದಲೇ ಅರ್ಜಿ ಸಲ್ಲಿಸಬಹುದು
3. ದಾಖಲೆಗಳನ್ನು ಆನ್ಲೈನ್ನಲ್ಲಿ ಅಪ್ಲೋಡ್ ಮಾಡಬಹುದು.
4. ಅರ್ಜಿಯ ಸ್ಥಿತಿಯನ್ನು ಆನ್ಲೈನ್ನಲ್ಲಿ ಟ್ರ್ಯಾಕ್ ಮಾಡಬಹುದು.
5. ಅನುಮೋದಿತ ಕಾರ್ಡ್ ಅನ್ನು ಡೌನ್ಲೋಡ್ ಮಾಡಿ ಮತ್ತು ಪ್ರಿಂಟ್ ತೆಗೆದುಕೊಳ್ಳಬಹುದು.

ರೈಲ್ವೆ ಟಿಕೆಟ್ನಲ್ಲಿ ರಿಯಾಯಿತಿ ಪಡೆಯಲು ಅರ್ಹರಾದ ದಿವ್ಯಾಂಗಜನ ಪ್ರಯಾಣಿಕರಿಗೆ ಅದರಲ್ಲೂ ಬೆಂಗಳೂರು ವಿಭಾಗದ ಪ್ರಯಾಣಿಕರಿಗೆ ಇದು ನೇರ ಅನ್ವಯವಾಗುತ್ತದೆ. ಈ ಸೌಲಭ್ಯದಿಂದಾಗಿ ದೂರದ ರೈಲ್ವೆ ಕಚೇರಿಗೆ ಅಲೆದಾಡುವ ತೊಂದರೆ ಉಳಿಯುತ್ತದೆ. ಕಾರ್ಡ್ ಅನುಮೋದನೆ ಆದ ನಂತರ ಡೌನ್ಲೋಡ್ ಮಾಡಿ ಪ್ರಿಂಟ್ ಮಾಡಿಕೊಂಡರೆ ಸಾಕು ಎಂದು ನೈರುತ್ಯ ರೇಲ್ವೆ ತಿಳಿಸಿದೆ ಎಂದು ತಿಳಿಸಿದ್ದಾರೆ.

ಈ ಕುರಿತು ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಅವರಿಗೆ ವಿಕಲಚೇತನ ಪರವಾಗಿ ಹಲವು ಬಾರಿ ಮನವಿ ಸಲ್ಲಿಸಲಾಗಿತ್ತು. ಈಗ ಅದಕ್ಕೆ ಸ್ಪಂದನೆ ಸಿಕ್ಕು ಕಾರ್ಯರೂಪಕ್ಕೆ ಬಂದಿರುವುದು ಸಂತಸಕರ ಎಂದು ಅವರು ಹರ್ಷ ವ್ಯಕ್ತಪಡಿಸಿದ್ದಾರೆ.

ಕನ್ನಡ ಉಳಿದರೆ ಗಡಿನಾಡು ಉಳಿಯುತ್ತದೆ: ಟೆನ್ನಿಸ್ ಕೃಷ್ಣ ಏಮ್ಸ್ ಸ್ಥಾಪನೆಗೆ ಕನ್ನಡ ಸೇನೆಯ ಬೃಹತ್ ಬೈಕ್ ಜಾಥಾ

ಕೆ.ಆರ್. ಕುಮಾರ್ ಅಭಿಪ್ರಾಯಪಟ್ಟರು.

ಜಾಥಾದ ನೇತೃತ್ವ ವಹಿಸಿದ್ದ ರಾಯಚೂರು ಜಿಲ್ಲಾಧ್ಯಕ್ಷ ಎಂ. ಬಸವರಾಜ ಮರಕಮದಿನ್ನಿ ಮಾತನಾಡಿ, ಗಡಿನಾಡು ಪ್ರದೇಶಗಳಲ್ಲಿ ಕನ್ನಡ ಭಾಷೆ ಮತ್ತು ಕನ್ನಡ ಶಾಲೆಗಳ ಸಂರಕ್ಷಣೆಗಾಗಿ ಸಂಘಟನೆ ನಿರಂತರ ಹೋರಾಟ ಮುಂದುವರಿಸಲಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಖ್ಯಾತ ಚಲನಚಿತ್ರ ನಟ ಟೆನ್ನಿಸ್ ಕೃಷ್ಣ ಭಾಗವಹಿಸಿ ಜಾಥಾಕ್ಕೆ ಬೆಂಬಲ ಸೂಚಿಸಿದರು.

ಪ್ರಮುಖ ಬೇಡಿಕೆಗಳು: ★ ಗಡಿನಾಡಿನಲ್ಲಿ ಕನ್ನಡ ಭಾಷೆ ಮತ್ತು ಸಂಸ್ಕೃತಿಯ ರಕ್ಷಣೆ, ★ ಸರ್ಕಾರಿ ಕನ್ನಡ ಶಾಲೆಗಳ ಸಂರಕ್ಷಣೆ ಮತ್ತು ಅಭಿವೃದ್ಧಿ ★ ರಾಜ್ಯದಾದ್ಯಂತ ಕನ್ನಡ ನಾಮಫಲಕ ಕಡ್ಡಾಯ ಜಾರಿ ★ ಕನ್ನಡಿಗರಿಗೆ ಉದ್ಯೋಗದಲ್ಲಿ ಆದ್ಯತೆ ★ ರಾಯಚೂರಿನಲ್ಲಿ ಏಮ್ಸ್ ಆಸ್ಪತ್ರೆ ಸ್ಥಾಪನೆ ★ ನೆಲ, ಜಲ ಹಾಗೂ ಗಡಿನಾಡಿನ ಹಕ್ಕುಗಳ ಸಂರಕ್ಷಣೆ.

ಈ ಸಂದರ್ಭದಲ್ಲಿ ಉಪಾಧ್ಯಕ್ಷರಾದ ದಾರಿ ದೀಪ ಮಂಜುನಾಥ್, ಹನುಮೇಶ್ ನಾಯಕ, ನಾಗಪ್ಪ, ಗೋವಿಂದ ಚವ್ಹಾಣ್, ಶರಣೋಜಿ ಪವಾರ್ ಅಮರೇಶ್ ನಾಯಕ ಸೇರಿದಂತೆ ಸಂಘಟನೆಯ ಪದಾಧಿಕಾರಿಗಳು ಹಾಗೂ ನೂರಾರು ಕನ್ನಡಾಭಿಮಾನಿಗಳು ಜಾಥಾದಲ್ಲಿ ಪಾಲ್ಗೊಂಡಿದ್ದರು.

21 ರಂದು ನೀಟ್-2026 ಮರು ಪರೀಕ್ಷೆಗೆ ಸಿದ್ದತೆ : ಡಿಸಿ



ಬಾಗಲಕೋಟೆ, ಜೂ.18-

ಜಿಲ್ಲೆಯಲ್ಲಿ ಜೂನ್ 21 ರಂದು ನಡೆಯಲಿರುವ ರಾಷ್ಟ್ರೀಯ ಅರ್ಹತಾ ಮತ್ತು ಪ್ರವೇಶ ಪರೀಕ್ಷೆ (ನೀಟ್- ಯುಜಿ) 2026ರ ಮರು ಪರೀಕ್ಷೆ ಯನ್ನು ಸುಗಮ, ಪಾರದರ್ಶಕ ಹಾಗೂ ದೋಷರಹಿತವಾಗಿ ನಡೆಸಲು ಎಲ್ಲ ರೀತಿ ಸಿದ್ದತೆ ಕೈಗೊಳ್ಳುವಂತೆ ಜಿಲ್ಲಾಧಿಕಾರಿ ಸಂಗಪ್ಪ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿ ಬುಧವಾರ ಜರುಗಿದ ನೀಟ್ ಪರೀಕ್ಷೆ-2026ರ ಕುರಿತು ಪೂರ್ವ ಸಿದ್ದತಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಬಾಗಲಕೋಟೆ ಜನರದಲ್ಲಿ 11 ಪರೀಕ್ಷಾ ಕೇಂದ್ರಗಳಲ್ಲಿ ನೀಟ್ ಪರೀಕ್ಷೆ ನಡೆಯಲಿದ್ದು, ಒಟ್ಟು 3967 ವಿದ್ಯಾರ್ಥಿಗಳು ಪರೀಕ್ಷೆ ಬರೆಯಲಿದ್ದಾರೆ. ಪರೀಕ್ಷಾ ಸಿದ್ದತೆ ಮತ್ತು ಸುಗಮ ನಿರ್ವಹಣೆಗೆ ಸಂಬಂಧಿಸಿದಂತೆ ಪ್ರತಿಯೊಂದು ಕೇಂದ್ರಗಳ ಸಿಬ್ಬಂದಿಗಳ ಚಲನವಲನ ಗಮನಿಸಲು ಓರ್ವ ಸಿಬ್ಬಂದಿಗಳನ್ನು ನೇಮಿಸಲು ತಿಳಿಸಿದರು.

ಪರೀಕ್ಷಾ ಕೇಂದ್ರಗಳಲ್ಲಿ ಅಗತ್ಯ ಮೂಲಸೌಕರ್ಯಗಳಾದ ವಿದ್ಯುತ್, ಕುಡಿಯುವ ನೀರು, ಸೌಚಾಲಯ, ತುರ್ತು ವೈದ್ಯಕೀಯ ಸೌಲಭ್ಯಗಳನ್ನು ಕಡ್ಡಾಯವಾಗಿ ಕಲ್ಪಿಸಬೇಕು. ಪರೀಕ್ಷಾರ್ಥಿಗಳು ಯಾವುದೇ ರೀತಿಯ ತೊಂದರೆಯಾಗದಂತೆ ನೋಡಿಕೊಳ್ಳಬೇಕು. ಅಲ್ಲದೇ ಕಾನೂನು ಸುವ್ಯವಸ್ಥೆ ಕಾಪಾಡುವ ಕುರಿತು ಚರ್ಚೆ ನಡೆಸಿದ ಜಿಲ್ಲಾಧಿಕಾರಿಗಳು ಪ್ರಶ್ನೆ ಪತ್ರಿಕೆಗಳ ಸುರಕ್ಷತೆ ಸಾಗಣೆ, ಪರೀಕ್ಷಾ ಕೇಂದ್ರಗಳಲ್ಲಿ ಸಿಸಿಟಿವಿ ಕಣ್ಗಾವಲು, ಪೊಲೀಸ್ ಬಂದೋಬಸ್ತ ಹಾಗೂ ಕೇಂದ್ರಗಳ ಸುತ್ತ ನಿಷೇದಾಜ್ಞೆ ಜಾರಿ ಗೊಳಿಸುವ ಕುರಿತು ಅಧಿಕಾರಿಗಳಿಗೆ ಸೂಚನೆ ನೀಡಿದರು. ನೀಟ್ ಮರು ಪರೀಕ್ಷೆಯು ಜೂ.21 ರಂದು ಮಧ್ಯಾಹ್ನ 2 ರಿಂದ ಸಂಜೆ 5.15ರ ವರೆಗೆ ನಡೆಯಲಿದ್ದು, ಪರೀಕ್ಷೆಗೆ ಕುಳಿತ ವಿದ್ಯಾರ್ಥಿಗಳ ಫ್ರಿಸ್ಕಿಂಗ್ ಕಾರ್ಯ ಬೆಳಿಗ್ಗೆ 11 ರಿಂದ ಮಧ್ಯಾಹ್ನ 1.30 ವರೆಗೆ ನಡೆಯಲಿದ್ದು, ಫ್ರಿಸ್ಕಿಂಗ್ ಸಮಯದಲ್ಲಿ ಎನ್.ಟಿ.ಎ ನಿಯೋಜಿಸಿರುವ ಏಜೆನ್ಸಿ ಜೊತೆಗೆ ಓರ್ವ ಪೊಲೀಸ್ ಸಿಬ್ಬಂದಿ ನಿಯೋಜಿಸಿ ಅವರ ಮೂಲಕ ಫ್ರಿಸ್ಕಿಂಗ್ ಕಾರ್ಯ ನಡೆಸಬೇಕು. ಜೂನ್ ತಿಂಗಳಲ್ಲಿ ಮಳೆಗಾಲ ಇರುವದರಿಂದ ಪರೀಕ್ಷಾ ಕೇಂದ್ರದ ಕಟ್ಟಡದಲ್ಲಿ ನೀರು ಸೋರಿಕೆಯಾಗದಂತೆ ಮುಂಜಿತವಾಗಿ ತಪಾಸಣೆ ಮಾಡಲು ತಿಳಿಸಿದರು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿದ್ದಾರ್ಥ ಗೋಯಲ್ ಮಾತನಾಡಿ ನೀಟ್ ಮರು ಪರೀಕ್ಷೆಗೆ 11 ಪರೀಕ್ಷಾ ಕೇಂದ್ರಗಳಿದ್ದು, ಪ್ರತಿಯೊಂದು ಕೇಂದ್ರಗಳಿಗೆ 10 ಜನ ಪೊಲೀಸ್ ಸಿಬ್ಬಂದಿಗಳನ್ನು ನಿಯೋಜಿಸಲಾಗುತ್ತಿದೆ. ಗೌಪ್ಯ ಸಾಮಗ್ರಿಗಳನ್ನು ಸುರಕ್ಷಿತವಾಗಿ ನಿರ್ವಹಿಸಲು ಬ್ಯಾಂಕಿನ ಸ್ಟ್ರಾಂಗ್ ರೂಮ್‌ಗೆ ಓರ್ವ ಎ.ಎಸ್. ಐ ಮತ್ತು 4 ಪೊಲೀಸ್ ಸಿಬ್ಬಂದಿಗಳನ್ನು ನಿಯೋಜಿಸಲಾಗುತ್ತಿದೆ ಎಂದು ತಿಳಿಸಿದರು.

ಸಭೆಯಲ್ಲಿ ಸರಕಾರಿ ಪಾಲಿಟೆಕ್ನಿಕ್ ಕಾಲೇಜನ ಪ್ರಾಚಾರ್ಯ ಪ್ರಭಾಕರ ಪಾಟೀಲ, ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಎ.ಸಿ.ಮನ್ನಿಕೇರಿ, ಪರೀಕ್ಷಾ ಕೇಂದ್ರಗಳ ಮುಖ್ಯ ಅಧೀಕ್ಷಕರು ಹಾಗೂ ಪರೀಕ್ಷಾ ವೀಕ್ಷಕರು ಉಪಸ್ಥಿತರಿದ್ದರು.

'ವಿಕಸಿತ್ ಭಾರತ್ ರೋಜಗಾರ್ ಯೋಜನೆ' ಯುವಶಕ್ತಿಗೆ ಉದ್ಯೋಗದ ಆಸರೆ- ಕೆ.ವಿ. ಪ್ರವೀಣ್



ಬಳ್ಳಾರಿ,ಜೂ.18-

ಕೇಂದ್ರ ಸರ್ಕಾರದ 'ಪ್ರಧಾನ ಮಂತ್ರಿ ವಿಕಸಿತ್ ಭಾರತ್ ರೋಜಗಾರ್ ಯೋಜನೆ' ದೇಶದಲ್ಲಿ ಉದ್ಯೋಗ ಸೃಷ್ಟಿ ಮತ್ತು ಯುವಕರಿಗೆ ಆರ್ಥಿಕ ಭದ್ರತೆ ನೀಡುವ ನಿಟ್ಟಿನಲ್ಲಿ ಜಾರಿಗೆ ತಂದಿರುವ ಅತ್ಯಂತ ಪ್ರಮುಖ ಯೋಜನೆಯಾಗಿದ್ದು, ಉದ್ಯೋಗದಾತರು ಮತ್ತು ಮೊದಲ ಬಾರಿಗೆ ಕೆಲಸಕ್ಕೆ ಸೇರುವ ಯುವಕರಿಗೆ ಉತ್ತೇಜನ ನೀಡಲು ಆಸರೆಯಾಗ ಲಿದೆ ಎಂದು ಬಳ್ಳಾರಿ ಪ್ರಾದೇಶಿಕ ಭವಿಷ್ಯ ನಿಧಿ ಕಚೇರಿಯ ಆಯುಕ್ತ ಕೆ.ವಿ. ಪ್ರವೀಣ್ ಅವರು ಹೇಳಿದರು.

ಬುಧವಾರ, ನಗರದ ರಾಘವೇಂದ್ರ ಕಾಲೋನಿಯ ಎರಡನೇ ಹಂತದಲ್ಲಿರುವ ಪಿಎಫ್ ಪ್ರಾದೇಶಿಕ ಕಚೇರಿ ಸಭಾಂಗಣದಲ್ಲಿ ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಯಾದ 'ಪ್ರಧಾನಮಂತ್ರಿ ವಿಕಸಿತ್ ಭಾರತ್ ರೋಜಗಾರ್ ಯೋಜನೆ' ಕುರಿತು ಸುದ್ದಿಗೋಷ್ಠಿಯನ್ನುದ್ದೇಶಿಸಿ ಅವರು ಮಾತನಾಡಿದರು.

ಹೊಸ ಉದ್ಯೋಗ ಸೃಷ್ಟಿ ಹಾಗೂ ದೇಶದ ಆರ್ಥಿಕತೆಗೆ ಚೇತರಿಕೆ ನೀಡುವ ನಿಟ್ಟನಲ್ಲಿ ಕೇಂದ್ರ ಸರ್ಕಾರದ ಈ ಯೋಜನೆ ಅತ್ಯಂತ ನಿರ್ಣಾಯಕ ಹೆಜ್ಜೆಯಾಗಿದೆ. ಈ ಯೋಜನೆಯ ಪ್ರಮುಖ ಗುರಿ ದೇಶದಲ್ಲಿ ಬರೋಬ್ಬರಿ 3.5 ಕೋಟಿ ಹೊಸ ಉದ್ಯೋಗಗಳನ್ನು ಸೃಷ್ಟಿಸುವುದು ಮತ್ತು ಸೃಷ್ಟಿಯಾದ ಉದ್ಯೋಗಗಳಲ್ಲಿ ಉದ್ಯೋಗಿಗಳು ಸ್ಥಿರವಾಗಿ ಮುಂದುವರಿಯುವಂತೆ ಪ್ರೋತ್ಸಾಹಿಸುವುದಾಗಿದೆ ಎಂದರು. ಈ ಯೋಜನೆಯು ಆಗಸ್ಟ್ 1, 2025 ರಿಂದ ಅಧಿಕೃತವಾಗಿ ಅನುಷ್ಠಾನಕ್ಕೆ ಬಂದಿದ್ದು, ಜುಲೈ 31, 2027 ರವರೆಗೆ ಒಟ್ಟು ಎರಡು ವರ್ಷಗಳ ಕಾಲ ಚಾಲ್ತಿಯಲ್ಲಿರಲಿದೆ. ದೇಶಾದ್ಯಂತ ಈ ಯೋಜನೆಯನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಲು ಕೇಂದ್ರ ಸರ್ಕಾರವು ರೂ. 1 ಲಕ್ಷ ಕೋಟಿ ಮೊತ್ತದ ಬಜೆಟ್ ಅನ್ನು ಮೀಸಲಿಟ್ಟಿದೆ ಎಂದು ವಿವರಿಸಿದರು.

ಭಾರತ ಸರ್ಕಾರದ ಭವಿಷ್ಯ ನಿಧಿ ಸಂಸ್ಥೆಯ ವ್ಯಾಪ್ತಿಗೆ ಒಳಪಡುವ (ಪಿಎಫ್ ಕವರ್ ಆಗಿರುವ) ಎಲ್ಲಾ ಖಾಸಗಿ ಸಂಸ್ಥೆಗಳು, ಸೇವಾ ವಲಯದ ಕಂಪನಿಗಳು, ಉತ್ಪಾದನಾ ವಲಯ, ಸೆಕ್ಯೂರಿಟಿ ಏಜೆನ್ಸಿಗಳು ಹಾಗೂ ಮ್ಯಾನ್‌ಪವರ್ ಏಜೆನ್ಸಿಗಳು ಈ ಯೋಜನೆಗೆ ಅರ್ಹವಾಗಿವೆ. ಮುಖ್ಯವಾಗಿ ಇದು ಕೇವಲ ಹೊಸದಾಗಿ ಉದ್ಯೋಗಕ್ಕೆ ಸೇರುವವರಿಗೆ ಮಾತ್ರ ಅನ್ವಯಿಸುತ್ತದೆ. ಈಗಾಗಲೇ ಕೆಲಸದಲ್ಲಿರುವ ಹಳೇ ಉದ್ಯೋಗಿಗಳಿಗೆ ಇದು ಅನ್ವಯಿಸುವುದಿಲ್ಲ. ಹೊಸ ಉದ್ಯೋಗಿ ಕನಿಷ್ಠ 6 ತಿಂಗಳು ಅದೇ ಸಂಸ್ಥೆಯಲ್ಲಿ ಕೆಲಸ ಮುಂದುವರಿಸುವುದು ಕಡ್ಡಾಯವಾಗಿದೆ ಎಂದು ತಿಳಿಸಿದರು.

ಈ ಯೋಜನೆಗಾಗಿ ಪ್ರತ್ಯೇಕ ಅಧಿಕೃತ ಪೋರ್ಟಲ್ (https:// pmvbry. labour.gov.in) ಆರಂಭಿಸಲಾಗಿದ್ದು, ಉದ್ಯೋಗದಾತರು ಇಲ್ಲಿ ಸುಲಭವಾಗಿ ಒನ್-ಟೈಮ್ ನೋಂದಣಿ ಮಾಡಿಕೊಳ್ಳಬಹುದು. ನೌಕರರು ಇದಕ್ಕೆ ಪ್ರತ್ಯೇಕವಾಗಿ ಅರ್ಜಿ ಸಲ್ಲಿಸುವ ಅಗತ್ಯವಿಲ್ಲ. ಕಂಪನಿಗಳು ಹೊಸ ನೌಕರರ ಪಿಎಫ್ ಖಾತೆಯನ್ನು ಆಧಾರ್ ಕಾರ್ಡ್‌ಗೆ ಲಿಂಕ್ ಮಾಡಿದಾಗ ಸಿಸ್ಟಮ್ ಸ್ವಯಂಚಾಲಿತವಾಗಿ ಅರ್ಹತೆಯನ್ನು ಪರಿಶೀಲಿಸಿ ಹಣವನ್ನು ಬ್ಯಾಂಕ್ ಖಾತೆಗೆ ಜಮಾ ಮಾಡುತ್ತದೆ ಎಂದರು.

ಪಿಎಫ್ ವ್ಯಾಪ್ತಿಯಲ್ಲಿ ಬರುವ ಸಂಸ್ಥೆಗಳಿಗೆ ಅವರು ನೇಮಿಸಿಕೊಳ್ಳುವ ಹೊಸ ಉದ್ಯೋಗಿಗಳ ಸಂಬಳದ ಆಧಾರದ ಮೇಲೆ ಪ್ರತಿ ತಿಂಗಳು ಕೇಂದ್ರ ಸರ್ಕಾರದಿಂದ ಇನ್ಸೆಂಟಿವ್ (ಪ್ರೋತ್ಸಾಹಧನ) ಸಿಗಲಿದೆ. ಸೇವಾ ವಲಯದ ಕಂಪನಿಗಳಿಗೆ 2 ವರ್ಷಗಳ ಕಾಲ (24 ತಿಂಗಳು) ಈ ಇನ್ಸೆಂಟಿವ್ ಸಿಗಲಿದೆ. ಉತ್ಪಾದನಾ ವಲಯದ ಕಂಪನಿಗಳಿಗೆ ವಿಶೇಷ ಉತ್ತೇಜನ ನೀಡಲು 4 ವರ್ಷಗಳ ಕಾಲ (48 ತಿಂಗಳು) ಇನ್ಸೆಂಟಿವ್ ಅವಧಿಯನ್ನು ವಿಸ್ತರಿಸಲಾಗಿದೆ. ಹೊಸದಾಗಿ ಸೇರ್ಪಡೆಯಾಗುವ ಉದ್ಯೋಗಿಗಳಿಗೆ ಗರಿಷ್ಠ ರೂ. 15,000 ವರೆಗೆ ಒಮ್ಮೆಯ ಇನ್ಸೆಂಟಿವ್ ಸಿಗಲಿದ್ದು, ಇದನ್ನು ಎರಡು ಕಂತುಗಳಲ್ಲಿ ನೀಡಲಾಗುತ್ತದೆ ಎಂದು ಹೇಳಿದರು.

ಮೊದಲ ಬಾರಿಗೆ ಉದ್ಯೋಗಕ್ಕೆ ಸೇರಿ ಭವಿಷ್ಯ ನಿಧಿ ಖಾತೆ ಪಡೆಯುತ್ತಿರುವ ಹೊಸ ಉದ್ಯೋಗಿಗಳಿಗೆ ಇದು ಅನ್ವಯಿಸುತ್ತದೆ. ಬಳ್ಳಾರಿ ವಲಯದಲ್ಲಿ ಇದುವರೆಗೆ ಇಂತಹ 1,374 ಹೊಸ ಕಾರ್ಮಿಕರು ಈ ಯೋಜನೆಯಡಿ ನೇರ ಹಣಕಾಸು ನೆರವು ಪಡೆಯಲು ಅರ್ಹರಾಗಿದ್ದಾರೆ. ಈ ಭಾಗದಡಿ ಉದ್ಯೋಗಿಗಳಿಗೆ ನೇರ ಲಾಭ ಸಿಗದಿದ್ದರೂ, ಉದ್ಯೋಗದಾತ ಸಂಸ್ಥೆಗಳಿಗೆ ಆರ್ಥಿಕ ನೆರವು ಸಿಗುತ್ತದೆ. ಉದಾಹರಣೆಗೆ, ಒಬ್ಬ ಉದ್ಯೋಗಿ ಈ ಹಿಂದೆ ಬೇರೆ ಸಂಸ್ಥೆಯಲ್ಲಿ ಕೆಲಸ ಮಾಡಿ ಯುಎನ್ ಸಂಖ್ಯೆ ಹೊಂದಿದ್ದು, ಈಗ ಹೊಸ ಸಂಸ್ಥೆಗೆ ಸೇರಿದರೆ ಆತನಿಗೆ ಭಾಗ 'ಎ' ಲಾಭ ಸಿಗುವುದಿಲ್ಲ. ಆದರೆ, ಆತನನ್ನು ಕೆಲಸಕ್ಕೆ ಸೇರಿಸಿಕೊಂಡ ಹೊಸ ಸಂಸ್ಥೆಗೆ ಸರ್ಕಾರದಿಂದ ಭಾಗ 'ಬಿ' ಅಡಿಯಲ್ಲಿ ಪ್ರೋತ್ಸಾಹಧನ ಸಿಗುತ್ತದೆ ಎಂದರು. ಬಳ್ಳಾರಿ ವಲಯದಲ್ಲಿ ಇಂತಹ 248 ಉದ್ಯೋಗದಾತ ಸಂಸ್ಥೆಗಳು ಈ ಸೌಲಭ್ಯ ಪಡೆದುಕೊಂಡಿವೆ. ಕೇಂದ್ರ ಸರ್ಕಾರದ ಈ ವಿನೂತನ ಯೋಜನೆಯು ಬಳ್ಳಾರಿ ಭಾಗದ ಸಾವಿರಾರು ಉದ್ಯೋಗಿಗಳಿಗೆ ಮತ್ತು ಉದ್ಯೋಗದಾತ ಸಂಸ್ಥೆಗಳಿಗೆ ಆರ್ಥಿಕವಾಗಿ ದೊಡ್ಡ ಆಸರೆಯಾಗಿದೆ ಎಂದು ತಿಳಿಸಿದರು.

ಈ ವೇಳೆ ಬಳ್ಳಾರಿ ಪ್ರಾದೇಶಿಕ ಭವಿಷ್ಯ ನಿಧಿ ಕಚೇರಿಯ ಜಾರಿ ಅಧಿಕಾರಿ ಅಬ್ದುಲ್ ಹಫೀಜ್, ಮೇಲ್ವಿಚಾರಕ ಜಡೇಶ್ ಹಾಗೂ ಇತರರಿದ್ದರು.

19 ರಂದು ಉಪಲೋಕಾಯುಕ್ತ ನ್ಯಾಯಮೂರ್ತಿ ಬಿ.ವೀರಪ್ಪ ಅವರಿಂದ ದೂರುಗಳ ವಿಚಾರಣೆ


ಬೀದರ್,ಜೂ.17-

ಬೀದರ ಜಿಲ್ಲೆಯಲ್ಲಿ ಕರ್ನಾಟಕ ಉಪಲೋಕಾಯುಕ್ತ-2 ಹಾಗೂ ನ್ಯಾಯಮೂರ್ತಿಗಳಾದ ಗೌರಾವಾನ್ವಿತ ಶ್ರೀ ಬಿ.ವೀರಪ್ಪ ಅವರು ಜಿಲ್ಲೆಯಲ್ಲಿ ಎರಡು ದಿನ ಪ್ರವಾಸಕೈಗೊಳ್ಳಲಿದ್ದಾರೆ, 2026ರ ಜೂನ್ 19 ರಂದು ಬೆಳಿಗ್ಗೆ 10 ರಿಂದ ಸಂಜೆ 5 ಗಂಟೆಯ ವರೆಗೆ ಬೀದರ ಪೂಜ್ಯ ಶ್ರೀ ಚನ್ನಬಸವ ಪಟ್ಟದೇವರ ರಂಗಮದಿರ ದಲ್ಲಿ ದೂರುದಾರರಿಂದ ದಾಖಲಾಗಿ ರುವ ದೂರುಗಳ ವಿಚಾರಣೆ ನಡೆಸಲಿದ್ದಾರೆ ಎಂದು ಕಲಬುರಗಿ ಕರ್ನಾಟಕ ಲೋಕಾಯುಕ್ತ ಪೊಲೀಸ್ ಅಧೀಕ್ಷಕರು ಸಿ.ಸಿದ್ದರಾಜು ಅವರು ತಿಳಿಸಿದ್ದಾರೆ.

ಸಭೆಯಲ್ಲಿ ಲೋಕಾಯುಕ್ತ ಸಂಸ್ಥೆಯಲ್ಲಿ ದಾಖಲಾಗಿರು ದೂರುಗಳ ಕುರಿತು ವಿಚಾರಣೆಗಳು ಕೈಕೊಳ್ಳುವ ಸಭೆಯಾಗಿರುವುದರಿಂದ ಅಂದು ಗೌರವಾನ್ವಿತರು ಸಾರ್ವಜನಿ ಕರಿಂದ ಯಾವುದೇ ರೀತಿಯ ದೂರುಗಳನ್ನು ಸ್ವೀಕರಿಸುವುದಿಲ್ಲ, ಸಾರ್ವಜನಿಕರು ದೂರು ದಾಖಲಿಸುವದಿದ್ದಲ್ಲಿ, ಕರ್ನಾಟಕ ಲೋಕಾಯುಕ್ತ ಪೊಲೀಸ್ ಠಾಣೆ, ಕೆ.ಎಚ್.ಬಿ ಕಾಲೋನಿ ಬಾಲಭವನ ಎದುರುಗಡೆ ಬೀದರ ಪಿನ್ ಕೋಡ್ 585 401ಗೆ ಹಾಜರಾಗಿ ದೂರು ಸಲ್ಲಿಸುವಂತೆ ಸೂಚಿಸಿದೆ.

ಹೆಚ್ಚಿನ ಮಾಹಿತಿಗಾಗಿ ಎಸ್‌ಪಿ ಮೊ.ನಂ.9364062519, ಡಿಎಸ್‌ಪಿ ಮೊ.ನಂ.9364062571, ಪಿಐ-1 ಮೊ.ನಂ.9364062672, ಪಿಐ-2 ಮೊ.ನಂ.9364062673, ಪಿಐ-3 ಮೊ.ನಂ.9364062674, ಪಿಐ-4 ಮೊ.ನಂ.9364062675ಗೆ ಸಂಪರ್ಕಿಸಬಹುದು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಡ್ರಗ್ ಮುಕ್ತ ಜಿಲ್ಲೆಗೆ ಕೈಜೋಡಿಸಿ -ಡಿಸಿ



ವಿಜಯನಗರ,ಜೂ.18-

ಯುವ ಪೀಳಿಗೆಯ ಭವಿಷ್ಯವನ್ನೇ ಕಸಿದುಕೊಳ್ಳುತ್ತಿರುವ ಡ್ರಗ್ಸ್ ಜಾಲದ ವಿರುದ್ಧ ಅಧಿಕಾರಿಗಳು ಅತ್ಯಂತ ಜಾಗೃತಿಯಿಂದ ಕ್ರಿಯಾಶೀಲರಾಗಿ ಕಾರ್ಯನಿರ್ವಹಿಸಬೇಕು. ವಿವಿಧ ಇಲಾಖೆಗಳೊಂದಿಗೆ ಜಂಟಿ ಕಾರ್ಯಾಚರಣೆ ನಡೆಸಿ ಡ್ರಗ್ ಮುಕ್ತ ಜಿಲ್ಲೆಗೆ ಶ್ರಮಿಸಬೇಕು ಎಂದು ಜಿಲ್ಲಾಧಿಕಾರಿ ಕವಿತಾ ಎಸ್. ಮನ್ನಿಕೇರಿ ಹೇಳಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದ್ದ ಜಿಲ್ಲಾ ಮಟ್ಟದ ನಾರ್ಕೋಟಿಕ್ಸ್ ಸಮಿತಿಯ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಶಾಲಾ-ಕಾಲೇಜುಗಳ ಹಾಗೂ ಹಾಸ್ಟೆಲ್‌ಗಳ ಆಸುಪಾಸಿನಲ್ಲಿರುವ ಅಂಗಡಿ ಮುಂಗಟ್ಟುಗಳು ಮಾದಕ ದ್ರವ್ಯ ಜಾಲದ ಕೇಂದ್ರಗಳಾಗುತ್ತಿವೆ. ಶಿಕ್ಷಣ ಸಂಸ್ಥೆಗಳ 100 ಮೀಟರ್ ವ್ಯಾಪ್ತಿಯಲ್ಲಿ ತಂಬಾಕು ಮತ್ತು ಯಾವುದೇ ಮಾದಕ ವಸ್ತುಗಳ ಮಾರಾಟ ಕಂಡುಬಂದರೆ ತಕ್ಷಣವೇ ಅಂಗಡಿಗಳ ಪರವಾನಗಿ ರದ್ದುಪಡಿಸಿ, ಕ್ರಿಮಿನಲ್ ಮೊಕದ್ದಮೆ ದಾಖಲಿಸಿ ಕ್ರಮಕೈಗೊಳ್ಳಬೇಕು. ಪೊಲೀಸ್ ಮತ್ತು ಅಬಕಾರಿ ಇಲಾಖೆಗಳು ಜಂಟಿಯಾಗಿ ಶಾಲಾ-ಕಾಲೇಜುಗಳ ಸುತ್ತ ಮುತ್ತ ನಿರಂತರ ದಾಳಿ ನಡೆಸಬೇಕು. ಈ ವೇಳೆ ಅಂತಹ ಪ್ರಕರಣ ಅಥವಾ ಅನುಮಾನಾಸ್ಪದ ಘಟನೆ ಕಂಡುಬಂದಲ್ಲಿ ನಿರ್ದಾಕ್ಷಿಣ್ಯವಾಗಿ ಕ್ರಮ ವಹಿಸಬೇಕು. ಕೆಲವು ಫಾರ್ಮಸಿಗಳಲ್ಲಿ ವೈದ್ಯರ ಚೀಟಿ ಇಲ್ಲದೆಯೂ ನಿಷೇಧಿತ ಮಾತ್ರೆಗಳು ಮತ್ತು ನೋವು ನಿವಾರಕ ಡ್ರಗ್ಸ್ ಗಳನ್ನು ಯುವಕರಿಗೆ ಮಾರಾಟ ಮಾಡುತ್ತಿರುವುದು ಗಮನಕ್ಕೆ ಬಂದಿದೆ. ಔಷಧಿ ನಿಯಂತ್ರಣ ಇಲಾಖೆಯ ಅಧಿಕಾರಿಗಳು ಜಿಲ್ಲೆಯ ಎಲ್ಲಾ ಮೆಡಿಕಲ್ ಸ್ಟೋರ್‌ಗಳ ಮೇಲೆ ನಿಯಮಿತವಾಗಿ ದಾಳಿ ನಡೆಸಬೇಕು. ಅನಧಿಕೃತವಾಗಿ ಅಥವಾ ನಿಯಮ ಬಾಹಿರವಾಗಿ ಇಂತಹ ಮಾತ್ರೆಗಳನ್ನು ಮಾರಾಟ ಮಾಡುವ ಅಂಗಡಿಗಳ ಲೈಸೆನ್ಸ್ ಅನ್ನು ತಕ್ಷಣವೇ ರದ್ದುಗೊಳಿಸಬೇಕು ಎಂದು ಸೂಚನೆ ನೀಡಿದರು.

ಇತ್ತೀಚಿನ ದಿನಗಳಲ್ಲಿ ಡಾರ್ಕ್ ವೆಬ್, ಸೋಷಿಯಲ್ ಮೀಡಿಯಾ ಹಾಗೂ ಕೊರಿಯರ್, ಪಾರ್ಸೆಲ್ ಸೇವೆಗಳ ಮೂಲಕ ಡ್ರಗ್ಸ್ ನೆಟ್ ವರ್ಕ್ ಕಾರ್ಯಾಚರಣೆ ನಡೆಸಲಾಗುತ್ತಿದೆ. ಜಿಲ್ಲಾ ಸೈಬರ್ ಕ್ರೈಮ್ ಪೊಲೀಸ್ ಘಟಕವು ಸಾಮಾಜಿಕ ಜಾಲತಾಣಗಳ ಮೇಲೆ ತೀವ್ರ ನಿಗಾ ಇಡಬೇಕು. ಜಿಲ್ಲೆಗೆ ಬರುವ ಪ್ರಮುಖ ಕೊರಿಯರ್ ಹಾಗೂ ಅಂಚೆ ಕಚೇರಿಗಳಲ್ಲಿ ತಪಾಸಣೆ ನಡೆಸಬೇಕು. ಯಾವುದೇ ರೀತಿಯ ಅನುಮಾನಾಸ್ಪದ ವಸ್ತುಗಳು ಕಂಡುಬಂದಲ್ಲಿ ಪರಿಶೀಲಿಸಿ ಖಚಿತಪಡಿಸಿಕೊಳ್ಳಬೇಕು. ಒಂದು ವೇಳೆ ಅನಧಿಕೃತ ವಸ್ತು, ಔಷಧಿ ಕಂಡುಬಂದಲ್ಲಿ ಸಂಬಂಧಪಟ್ಟವರ ವಿರುದ್ಧ ಪ್ರಕರಣ ದಾಖಲಿಸಿ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ತಾಕೀತು ಮಾಡಿದರು.

ಕೇವಲ ಕಾನೂನು ಕ್ರಮಗಳಿಂದಲ್ಲದೆ ಜನದಟ್ಟಣೆ ಹೆಚ್ಚಿರುವ ಸಾರ್ವಜನಿಕ ಸ್ಥಳ, ಶಾಲಾ ಕಾಲೇಜು, ಹಾಸ್ಟೆಲ್ಗಳಲ್ಲಿ ಮಾದಕ ವಸ್ತುಗಳ ಬಳಕೆಯಿಂದಾಗುವ ದುಷ್ಪರಿಣಾಮದ ಕುರಿತು ವ್ಯಾಪಕ ಜಾಗೃತಿ ಮೂಡಿಸಬೇಕು. ಗ್ರಾಮ ಪಂಚಾಯತ್ ಹಾಗೂ ವಾರ್ಡ್ ಮಟ್ಟದಲ್ಲಿ ನಾಗರಿಕರ ಸಮಿತಿಗಳನ್ನು ರಚಿಸುವ ಮೂಲಕ ತಳಮಟ್ಟದಲ್ಲಿಯೇ ಕಡಿವಾಣ ಹಾಕಬೇಕು. ಡ್ರಗ್ಸ್ ದಂಧೆಯಲ್ಲಿ ತೊಡಗಿರುವವರು ಎಷ್ಟೇ ಪ್ರಭಾವಿಯಾಗಿದ್ದರೂ, ಪ್ರಭಾವಿಗಳ ಸೂಚನೆಗಳಿಗೆ ಮಣಿಯದೆ ಕಾನೂನು ಕ್ರಮ ಜರುಗಿಸಿ. ಮಾದಕ ವ್ಯಸನಕ್ಕೆ ಬಲಿಯಾಗುತ್ತಿರುವ ಯುವಕರನ್ನು ಪತ್ತೆಹಚ್ಚಿ, ಅವರಿಗೆ ಸೂಕ್ತ ಪುನರ್ವಸತಿ ಕೇಂದ್ರಗಳ ಮೂಲಕ ಮರುಜೀವ ನೀಡುವ ಕೆಲಸ ಮಾಡಬೇಕಿದೆ.


ಈ ವೇಳೆ ಔಷಧಿ ನಿಯಂತ್ರಣ ಇಲಾಖೆಯ ಅಧಿಕಾರಿಗಳು ಪ್ರತಿಕ್ರಿಯಿಸಿ, ನಿರಂತರವಾಗಿ ದಾಳಿ ನಡೆಸಿ ಪರಶೀಲನೆ ನಡೆಸಲಾಗುತ್ತಿದೆ. ಸಾರ್ವಜನಿಕರಿಂದಲೂ ದೂರಗಳು ಬಂದಲ್ಲಿ ಖಚಿತ ಮಾಹಿತಿ ಮೇರೆಗೆ ದಾಳಿ ನಡೆಸಿ ಕ್ರಮ ಕೈಗೊಳ್ಳಲಾಗುವುದು. ಅದರಂತೆ ಜಿಲ್ಲೆಯ ಹರಪನಹಳ್ಳಿ ತಾಲ್ಲೂಕಿನಲ್ಲಿ ನಿಷೇಧಿತ ಔಷಧ ವಿತರಣೆಗೆ ಸಂಬಂಧಿಸಿದಂತೆ ದೂರು ದಾಖಲಾಗಿದೆ. ಅದರಂತೆ ಬೇಟಿ ನೀಡಿ ಪರಿಶೀಲನೆ ವೇಳೆ ದೃಡಪಟ್ಟಿದೆ. ಅಥಕ್ಕೆ ಸಂಬಂಧಿಸಿದಂತೆ ಸಂಬಂಧಪಟ್ಟ ಫಾರ್ಮಸಿಗೆ ಈಗಾಗಲೇ ನೋಟಿಸ್ ನೀಡಲಾಗಿದ್ದು, ಪರವಾನಗಿ ಸಹ ರದ್ದುಪಡಿಸಲಾಗುವುದು ಎಂದು ಮಾಹಿತಿ ನೀಡಿದರು.

ಈ ವೇಳೆ ಪೊಲೀಸ್ ವರಿಷ್ಠಾಧಿಕಾರಿ ಎಸ್.ಜಾಹ್ನವಿ, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಮಂಜುನಾಥ್, ಡಿವೈಎಸ್ಪಿ ಮುರುಳಿಧರ ರಾವ್, ಆರ್‌ಟಿಓ ದಾಮೋದರ್, ನಗರಸಭೆ ಪೌರಾಯುಕ್ತ ಶಿವಕುಮಾರ್, ಸೇರಿದಂತೆ ವಿವಿಧ ಇಲಾಖೆ ಜಿಲ್ಲಾ ಮಟ್ಟದ ಅಧಿಕಾರಿಗಳು ಇದ್ದರು.

ನಿಮ್ಮೂರು ಸುದ್ದಿ

ಸಂಪಾದಕೀಯ

ಅಧಿಕಾರಸ್ಥರ ಅತಿಯಾಸೆಗೆ ಬಿಡದಿ ರೈತರು ಬಲಿಯಾಗಬೇಕೇ?



ಬಿಡದಿ ಟೌನ್‌ಶಿಪ್ ಯೋಜನೆ ಕೇವಲ ನಗರಾಭಿವೃದ್ಧಿಯ ಪ್ರಶ್ನೆಯಲ್ಲ. ಸರ್ಕಾರ ಇದನ್ನು ಬೆಂಗಳೂರು ನಗರದ ಮೇಲಿನ ಒತ್ತಡ ಕಡಿಮೆ ಮಾಡುವ ಹಾಗೂ ಯೋಜಿತ ನಗರೀಕರಣಕ್ಕೆ ಅಗತ್ಯವಾದ ಹೆಜ್ಜೆ ಎಂದು ಸಮರ್ಥಿಸಿಕೊಂಡರೆ; ಬಿಡದಿಯ ಕೃಷಿಕರು, ಕೃಷಿ ಕಾರ್ಮಿಕರು ಮತ್ತು ಸ್ಥಳೀಯರು ಇದನ್ನು ಭೂಮಿ ಮತ್ತು ಬದುಕಿನ ಪ್ರಶ್ನೆ ಎನ್ನುತ್ತಿದ್ದಾರೆ.

ಕರ್ನಾಟಕ ಸರ್ಕಾರವು ಬೆಂಗಳೂರು ನಗರದ ಮೇಲಿನ ಒತ್ತಡವನ್ನು ಕಡಿಮೆ ಮಾಡಲು ಹಾಗೂ ಯೋಜಿತ ನಗರೀಕರಣಕ್ಕೆ ಉತ್ತೇಜನ ನೀಡಲು ಬಿಡದಿ ಪ್ರದೇಶದಲ್ಲಿ ಹೊಸ ಟೌನ್‌ಶಿಪ್ ಅಭಿವೃದ್ಧಿ ಯೋಜನೆಯನ್ನು ಮುಂದಿಟ್ಟಿದೆ.

ಇದೇನು ಹೊಸದಲ್ಲ, ಎಚ್.ಡಿ. ಕುಮಾರಸ್ವಾಮಿ, ಯಡಿಯೂರಪ್ಪ, ಸಿದ್ದರಾಮಯ್ಯನವರ ಸರ್ಕಾರವಿದ್ದಾಗಲೇ ಈ ಬಗ್ಗೆ ಪ್ರಸ್ತಾಪಿಸಲಾಗಿತ್ತು. ವಿರೋಧ ವ್ಯಕ್ತವಾದ್ದರಿಂದ ಕೈಬಿಡಲಾಗಿತ್ತು. ಈಗ ಬೆಂಗಳೂರು ನಗರ ಬೆಳೆದಂತೆಲ್ಲ, ಅದರ ಮೇಲಿನ ಒತ್ತಡ ಹೆಚ್ಚಾದಂತೆಲ್ಲ, ಟೌನ್‌ಶಿಪ್ ನೆಪದ ವಿಸ್ತರಣೆ ಮತ್ತೆ ಮುನ್ನೆಲೆಗೆ ಬಂದಿದೆ. ಬಿಡದಿ ಟೌನ್‌ಶಿಪ್‌ಗಾಗಿ ಸರ್ಕಾರ ಅಧಿಸೂಚನೆ ಹೊರಡಿಸಿದೆ. ಇದನ್ನು ಸರ್ಕಾರ ಅಭಿವೃದ್ಧಿ ಎನ್ನುತ್ತಿದೆ, ಹೊಸ ಅವಕಾಶಗಳು ತೆರೆಯಲಿವೆ ಎಂದು ಸಮರ್ಥಿಸಿಕೊಳ್ಳುತ್ತಿದೆ.

ಬೆಂಗಳೂರು ನಗರ ಇಂದು ಜನಸಂಖ್ಯೆ, ವಾಹನ ದಟ್ಟಣೆ, ವಸತಿ ಸಮಸ್ಯೆ ಮತ್ತು ಮೂಲಸೌಕರ್ಯಗಳ ಕೊರತೆಯಿಂದ ಬಳಲುತ್ತಿದೆ. ಬಿಡದಿಯಲ್ಲಿ ಉದ್ಯೋಗ, ವಸತಿ ಮತ್ತು ಸೇವಾ ಸೌಲಭ್ಯಗಳನ್ನು ಒಳಗೊಂಡ ಸಮಗ್ರ ಟೌನ್‌ಶಿಪ್ ನಿರ್ಮಾಣವಾದರೆ, ಜನಸಂಖ್ಯೆಯ ಒಂದು ಭಾಗವನ್ನು ಅಲ್ಲಿಗೆ ಸೆಳೆಯುವ ಸಾಧ್ಯತೆ ಇದೆ. ಹೊಸ ಟೌನ್‌ಶಿಪ್‌ಗಳು ಸಾಮಾನ್ಯವಾಗಿ ಕೈಗಾರಿಕೆ, ಐಟಿ ಪಾರ್ಕ್, ಶಿಕ್ಷಣ ಸಂಸ್ಥೆಗಳು, ಆಸ್ಪತ್ರೆಗಳು ಮತ್ತು ವ್ಯಾಪಾರ ಕೇಂದ್ರಗಳನ್ನು ಆಕರ್ಷಿಸುತ್ತವೆ. ಇದರಿಂದ ಸ್ಥಳೀಯರಿಗೆ ಉದ್ಯೋಗ ಸೃಷ್ಟಿಯಾಗಲಿದೆ ಮತ್ತು ಆ ಭಾಗದ ಆರ್ಥಿಕ ಚಟುವಟಿಕೆಗಳು ಹೆಚ್ಚಾಗಲಿದೆ ಎನ್ನುತ್ತಿದೆ ಸರ್ಕಾರ.

ಇದು ನಿಜ. ಆದರೆ, ಬಿಡದಿ ಟೌನ್‌ಶಿಪ್ ಯೋಜನೆ ಕೇವಲ ನಗರಾಭಿವೃದ್ಧಿಯ ಪ್ರಶ್ನೆಯಲ್ಲ. ಸರ್ಕಾರ ಇದನ್ನು ಬೆಂಗಳೂರು ನಗರದ ಮೇಲಿನ ಒತ್ತಡ ಕಡಿಮೆ ಮಾಡುವ ಹಾಗೂ ಯೋಜಿತ ನಗರೀಕರಣಕ್ಕೆ ಅಗತ್ಯವಾದ ಹೆಜ್ಜೆ ಎಂದು ಸಮರ್ಥಿಸಿಕೊಂಡರೆ; ಬಿಡದಿಯ ಕೃಷಿಕರು, ಕೃಷಿ ಕಾರ್ಮಿಕರು ಮತ್ತು ಸ್ಥಳೀಯರು ಇದನ್ನು ಭೂಮಿ ಮತ್ತು ಬದುಕಿನ ಪ್ರಶ್ನೆ ಎನ್ನುತ್ತಿದ್ದಾರೆ. ಬಾಯಿಲ್ಲದವರ ಮೇಲೆ ಬಲಿಷ್ಠರ ದಾಳಿ ಎಂದು ವ್ಯಾಖ್ಯಾನಿಸುತ್ತಿದ್ದಾರೆ.

ಅಕಸ್ಮಾತ್ ಅಧಿಕಾರಸ್ಥರ ಆಸೆಯಂತೆ ಭೂಸ್ವಾಧೀನವಾದರೆ, ಫಲವತ್ತಾದ ಕೃಷಿಭೂಮಿಗಳು ನಗರೀಕರಣದ ಒತ್ತಡಕ್ಕೆ ಸಿಲುಕುವ ಅಪಾಯವಿದೆ. ಕೆರೆಗಳು, ಜಲಮೂಲಗಳು, ಅರಣ್ಯ ಪ್ರದೇಶಗಳು ಮತ್ತು ಭೂಗರ್ಭ ಜಲದ ಮೇಲೆ ನಗರೀಕರಣದ ಒತ್ತಡ ಹೆಚ್ಚಾಗಬಹುದು. ಗ್ರಾಮೀಣ ಪ್ರದೇಶಗಳು ವೇಗವಾಗಿ ನಗರೀಕರಣಗೊಂಡಾಗ ಸ್ಥಳೀಯ ಸಂಸ್ಕೃತಿ, ಸಮುದಾಯ ಸಂಬಂಧಗಳು ಮತ್ತು ಪರಂಪರೆಯ ಜೀವನಶೈಲಿ ಬದಲಾಗಬಹುದು. ಅದನ್ನು ನಂಬಿದ, ಪಾಲಿಸಿಕೊಂಡು ಬಂದ ಅವರ ಬದುಕು ಬರಡಾಗಬಹುದು.

ಒಮ್ಮೆ ಕೃಷಿಭೂಮಿ ಕಳೆದುಕೊಂಡರೆ ಅದನ್ನು ಮರಳಿ ಪಡೆಯುವುದು ಮತ್ತೆ ಹುಟ್ಟಿ ಬಂದರೂ ಸಾಧ್ಯವಿಲ್ಲ ಎನ್ನುವುದು ರೈತರಿಗಷ್ಟೇ ಗೊತ್ತಿರುವ ಸತ್ಯ. ಅಕಸ್ಮಾತ್ ಭೂಸ್ವಾಧೀನವಾದರೆ, ಸೂಕ್ತ ಪರಿಹಾರ ಸಿಗದಿದ್ದರೆ, ಪುನರ್ವಸತಿ ಕಲ್ಪಿಸದಿದ್ದರೆ ರೈತರು ತಮ್ಮ ಸಾಂಪ್ರದಾಯಿಕ ಜೀವನೋಪಾಯವನ್ನು ಕಳೆದುಕೊಳ್ಳಬಹುದು. ಒಂದು ವೇಳೆ ಸಮಯಕ್ಕೆ ಸರಿಯಾಗಿ ಹಣ ಸಿಕ್ಕರೂ, ಅದನ್ನು ಯೋಗ್ಯರೀತಿಯಲ್ಲಿ ಬಳಸಿಕೊಳ್ಳುವ ಬುದ್ಧಿವಂತಿಕೆಯಿಲ್ಲದೆ ಬದುಕು ಬೀದಿಗೆ ಬೀಳಬಹುದು. ಇದಕ್ಕೆ ಅತ್ಯುತ್ತಮ ಉದಾಹರಣೆಯಾಗಿ, ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕಾಗಿ ಭೂಮಿ ಬಿಟ್ಟುಕೊಟ್ಟ ದೇವನಹಳ್ಳಿ ಸುತ್ತಮುತ್ತ ರೈತರ ಇಂದಿನ ಸ್ಥಿತಿಯನ್ನು ಧ್ಯಾನಿಸುವ ಅಗತ್ಯವಿದೆ. ಕೇವಲ 20 ವರ್ಷಗಳ ಅಂತರದಲ್ಲಿ ಅಂದಿನ ಭೂಮಾಲೀಕ ರೈತ, ಇಂದು ಭಿಕಾರಿಯಾಗಿದ್ದಾನೆ. ಅವನದೇ ಭೂಮಿ ಮೇಲೆ ಎದ್ದುನಿಂತ ಗಗನಚುಂಬಿ ಕಟ್ಟಡಗಳಲ್ಲಿ ಭದ್ರತಾ ಸಿಬ್ಬಂದಿಯಾಗಿ, ಗಿಡಗಳಿಗೆ ನೀರುಣಿಸುವ, ಕಸ ಗುಡಿಸುವ, ಕಾರು ತೊಳೆಯುವ ದಿನಗೂಲಿ ಕಾರ್ಮಿಕನಾಗಿ ಬದಲಾಗಿದ್ದಾನೆ.

ಇದು ಆಳುವ ಸರ್ಕಾರಕ್ಕೆ ತಿಳಿಯದ ವಿಷಯವಲ್ಲ. ಆದರೂ ಟೌನ್‌ಶಿಪ್ ನಿರ್ಮಾಣಕ್ಕಾಗಿ ಒಟ್ಟು 7,481 ಎಕರೆ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲು ಸರ್ಕಾರ ಮುಂದಾಗಿದೆ. ಈ ಪ್ರಾಜೆಕ್ಟ್‌ಗಾಗಿ ಬಿಡದಿ ಹೋಬಳಿಯ ಒಂಬತ್ತು ಗ್ರಾಮಗಳನ್ನು ಗುರುತಿಸಲಾಗಿದೆ. ಮೊದಲ ಹಂತದಲ್ಲಿ ಸುಮಾರು 518 ಎಕರೆ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲು ಸರ್ಕಾರ ಅಂತಿಮ ಅಧಿಸೂಚನೆ ಹೊರಡಿಸಿದೆ.

ಭೂಮಾಲೀಕರಾದ ನಮ್ಮನ್ನು ಕೇಳದೆ ಅಧಿಸೂಚನೆ ಹೊರಡಿಸಿದ ಸರ್ಕಾರದ ವಿರುದ್ಧ ಆಕ್ರೋಶಗೊಂಡ ಈ ಭಾಗದ ರೈತರು, ಬದುಕಿಗೆ ಆಧಾರವಾದ ಭೂಮಿ ಬಿಟ್ಟುಕೊಡುವುದಿಲ್ಲವೆಂದು ಪ್ರತಿಭಟನೆಗೆ ಇಳಿದಿದ್ದಾರೆ. ಕೆಲ ಸಂಘ-ಸಂಸ್ಥೆಗಳು ರೈತರ ಬೆನ್ನಿಗೆ ನಿಂತು ಬೆಂಬಲಿಸುತ್ತಿವೆ. ಕಾಂಗ್ರೆಸ್ ಪಕ್ಷದ ನಾಯಕ ರಾಹುಲ್ ಗಾಂಧಿಯವರಿಗೆ ಪತ್ರ ಬರೆದು ಪ್ರಾಜೆಕ್ಟ್ ತಡೆಹಿಡಿಯಲು ಮನವಿ ಮಾಡಿಕೊಳ್ಳಲಾಗಿದೆ. ಧರಣೆನಿರತ ರೈತರೊಂದಿಗೆ ಈಗ ವಿರೋಧ ಪಕ್ಷಗಳಾದ ಬಿಜೆಪಿ ಮತ್ತು ಜೆಡಿಎಸ್ ನಾಯಕರು, ಕೊರಳಿಗೆ ಹಸಿರು ಟವಲ್ ಸುತ್ತಿಕೊಂಡು, ಸರ್ಕಾರದ ವಿರುದ್ಧ ಕೂಗಾಡುತ್ತಿದ್ದಾರೆ. ಇದು ಸಾರ್ವಜನಿಕ ಹಿತಾಸಕ್ತಿಯ ಯೋಜನೆಯಲ್ಲ, ಅಧಿಕಾರ, ರಾಜಕೀಯ ಮತ್ತು ರಿಯಲ್ ಎಸ್ಟೇಟ್ ಹಿತಾಸಕ್ತಿಗಳ ಸಂಗಮವೆಂದು ಟೌನ್‌ಶಿಪ್ ಹಿಂದಿನ ಹುನ್ನಾರವನ್ನು ಬಯಲುಗೊಳಿಸುತ್ತಿದ್ದಾರೆ.

ಇಂದು ರೈತರ ಪರ ನಿಂತು ಆಳುವ ಸರ್ಕಾರದ ಟೌನ್‌ಶಿಪ್ ಯೋಜನೆ ವಿರೋಧಿಸುತ್ತಿರುವ ಬಿಜೆಪಿಯ ಯಡಿಯೂರಪ್ಪ ಮತ್ತು ಜೆಡಿಎಸ್ ಕುಮಾರಸ್ವಾಮಿಯವರೇ ಈ ಹಿಂದೆ, ಬೆಂಗಳೂರು ಸುತ್ತಮುತ್ತ ಐದು ಟೌನ್‌ಶಿಪ್ ಮಾಡಲು ಮುಂದಾಗಿದ್ದರು. ಅದರಲ್ಲೂ ಬಿಡದಿಯಿಂದಲೇ ಗೆದ್ದ ಕುಮಾರಸ್ವಾಮಿಯವರು, ಟೌನ್‌ಶಿಪ್‌ಗೆ 400 ಕೋಟಿ ರೂಪಾಯಿ ಠೇವಣಿ ಇಟ್ಟಿದ್ದರು. ಆದರೆ ಆಗ ವಿರೋಧ ಪಕ್ಷವಾಗಿದ್ದ ಕಾಂಗ್ರೆಸ್, ರೈತರ ಪರ ನಿಂತು, ಯೋಜನೆಯನ್ನು ಬಲವಾಗಿ ವಿರೋಧಿಸಿತ್ತು. ಅದರ ಫಲವಾಗಿ ಗೆಜೆಟ್ ನೋಟಿಫಿಕೇಶನ್ ಆಗಿದ್ದರೂ, ಭೂಮಿ ಖರೀದಿ ಕೈಬಿಡಬೇಕಾದ ಅನಿವಾರ್ಯತೆ ಎದುರಾಗಿತ್ತು. ಈಗ ಅದೇ ಕಾಂಗ್ರೆಸ್ ಅಧಿಕಾರದಲ್ಲಿದೆ, ಆಗ ವಿರೋಧಿಸಿದ್ದ ಬಿಡದಿ ಟೌನ್‌ಶಿಪ್ ಯೋಜನೆಯನ್ನೇ ಕಾಂಗ್ರೆಸ್ ಮಾಡಲು ಮುಂದಾಗಿದೆ.

ಬಿಜೆಪಿ, ಜೆಡಿಎಸ್, ಕಾಂಗ್ರೆಸ್- ಪಕ್ಷಾತೀತವಾಗಿ ಎಲ್ಲರೂ ಟೌನ್‌ಶಿಪ್ ಪರವಾಗಿದ್ದಾರೆ. ಅಧಿಕಾರದ ಬಲದಿಂದ ಬಡ ರೈತರ ಭೂಮಿ ಕಬಳಿಸಲು ಹೊಂಚು ಹಾಕುತ್ತಿದ್ದಾರೆ. ಟೌನ್‌ಶಿಪ್ ಯೋಜನೆಯ ನೆಪದಲ್ಲಿ ರಿಯಲ್ ಎಸ್ಟೇಟ್ ವ್ಯವಹಾರ ಮುಖ್ಯವಾಗಿದೆ. ಕೇಂದ್ರ ಸಚಿವ ಕುಮಾರಸ್ವಾಮಿಯವರು, ಈಗೇನ್ ಮಾಡ್ಲಿಕ್ಕೆ ಹೊರಟಿದಾರಲ್ಲ ಬಿಡದಿ ಟೌನ್‌ಶಿಪ್, ಅದು 33 ಸಾವಿರ ಕೋಟಿ ಹಗರಣ ಎಂದಿದ್ದಾರೆ. ಅದಕ್ಕೆ ಕಾಂಗ್ರೆಸ್ ನಾಯಕರು, ಕುಮಾರಸ್ವಾಮಿಯವರ ಕುಟುಂಬ 100 ಎಕರೆ ಬೇಸಾಮಿ ಆಸ್ತಿ ಹೊಂದಿದೆ. ಸರ್ಕಾರ ಭೂಸ್ವಾಧೀನಪಡಿಸಿಕೊಳ್ಳಲು ಮುಂದಾಗಿರುವಾಗ, ಪರಿಹಾರ ಪಡೆಯಲು ಅವರೇ ಅರ್ಜಿ ಹಾಕಿದ್ದಾರೆ ಎಂದು ದೂರುತ್ತಿದ್ದಾರೆ. ಜೊತೆಗೆ ಅವರ ಕೊಳಕುತನ ತೋರುವ ಪೋಸ್ಟರ್ ವಾರ್ ಕೂಡ ಬಹಿರಂಗವಾಗಿದೆ. ಒಟ್ಟಿನಲ್ಲಿ ಅವರ ಮಾತು ಮತ್ತು ವರ್ತನೆಗಳೇ ಅವರ ಸಾಚಾತನವನ್ನು ಬಯಲು ಮಾಡುತ್ತಿವೆ.

ಅಧಿಕಾರಸ್ಥರು ಹೀಗೆ ಬೆತ್ತಲಾದಷ್ಟೂ ಒಳ್ಳೆಯದು. ಅದು ಅಧಿಕಾರಸ್ಥರನ್ನು ಅನುಮಾನದಿಂದ ನೋಡುವಂತೆ ಮಾಡುತ್ತದೆ, ಅವರ ನಿಲುವು-ನಿರ್ಧಾರಗಳನ್ನು ಪ್ರಶ್ನಿಸುವಂತೆ ಪ್ರೇರೇಪಿಸುತ್ತದೆ. ನಿನ್ನೆ ದೇವನಹಳ್ಳಿಯ ರೈತರಿಗಾದದ್ದು ನಾಳೆ ಬಿಡದಿಯ ರೈತರಿಗೆ ಆಗುತ್ತದೆ ಎಂಬುದನ್ನು ಮನಗಾಣಿಸುತ್ತದೆ. ಅವರ ಪರ ದೃಢವಾಗಿ ನಿಲ್ಲುವಂತೆ ಮಾಡುತ್ತದೆ. ಈ ವಿರೋಧ ಗಟ್ಟಿಗೊಂಡ ಪರಿಣಾಮವಾಗಿಯೇ, ದೇವನಹಳ್ಳಿ ತಾಲೂಕಿನ ಚನ್ನರಾಯಪಟ್ಟಣದ ರೈತರ ಭೂಸ್ವಾಧೀನವನ್ನು ಸರ್ಕಾರ ಕೈಬಿಟ್ಟಿದ್ದು. ಇಂತಹ ಹೋರಾಟ, ವಿರೋಧ ಇಲ್ಲೂ ಗಟ್ಟಿಗೊಳ್ಳಬೇಕಿದೆ. ಅಧಿಕಾರಸ್ಥರ ಅತಿಯಾಸೆಗೆ ಅಂಕುಶ ಹಾಕಬೇಕಿದೆ.

ಕೃಷಿ ಇಲಾಖೆಯಿಂದ ರಸಗೊಬ್ಬರ ದರ ಪಟ್ಟಿ ಪ್ರಕಟ

ರೈತರಿಗೆ ನಿಗದಿತ ದರದಲ್ಲಿ ರಸಗೊಬ್ಬರ ವಿತರಿಸಲು ಜಂಟಿ ಕೃಷಿ ನಿರ್ದೇಶಕರಿಂದ ಸೂಚನೆ

ರಾಯಚೂರು ಜೂನ್ 18

ರಾಯಚೂರು ಕೃಷಿ ಇಲಾಖೆಯಿಂದ 2026-27ನೇ ಸಾಲಿನ ಮುಂಗಾರು ಹಂಗಾಮಿನ ವಿವಿಧ ರಸಗೊಬ್ಬರಗಳಾದ ಯೂರಿಯಾ, ಡಿ.ಎ.ಪಿ, ಎಮ್.ಓ.ಪಿ, ಎಸ್.ಎಸ್.ಪಿ ಮತ್ತು ಕಾಂಪ್ಲೆಕ್ಸ್ ದರಪಟ್ಟಿಯನ್ನು ನಿಗದಿ ಮಾಡಲಾಗಿದ್ದು, ನಿಗದಿತ ದರದ ಪ್ರಕಾರ ಜಿಲ್ಲೆಯ ರೈತರಿಗೆ ರಸಗೊಬ್ಬರವನ್ನು ಮಾರಾಟ ಮಾಡಬೇಕು. ಹೆಚ್ಚಿನ ದರಕ್ಕೆ ಮಾರಾಟ ಮಾಡಿದಲ್ಲಿ ಅಂತಹ ರಸಗೊಬ್ಬರ ಮಾರಾಟಗಾರರ ವಿದ್ದರು ಕ್ರಮ ಜರುಗಿಸಲಾಗುತ್ತದೆ ಎಂದು ಕೃಷಿ ಇಲಾಖೆ ಜಂಟಿ ನಿರ್ದೇಶಕರಾದ ಪ್ರಕಾಶ್ ಚೌವಾಣ್ ಅವರು ತಿಳಿಸಿದ್ದಾರೆ.

ಜಿಲ್ಲೆಯಲ್ಲಿ ಡಿ.ಎ.ಪಿ ರಸಗೊಬ್ಬರ ಪ್ರತಿ 50 ಕೆ.ಜಿ ಚೀಲಕ್ಕೆ ವಿವಿಧ ಕಂಪನಿಗಳ ದರಪಟ್ಟಿ: ಗುಜರಾತ್ ಸ್ಟೇಟ್ ಫರ್ಟಿಲೈಜರ್ಸ್ ಕೆಮಿಕಲ್ ಲಿಮಿಟೆಡ್ (ಜಿ.ಎಸ್.ಎಫ್.ಸಿ) 1350, ಇಂಡಿಯನ್ ಪೊಟ್ಯಾಶ್ ಲಿಮಿಟೆಡ್ (ಐ.ಪಿ.ಎಲ್) 1350, ಇಂಡಿಯನ್ ಪಾರ್ಮರ್ ಫರ್ಟಿಲೈಜರ್ಸ್ ಲಿಮಿಟೆಡ್ (ಇಫ್ಕೋ) 1350, ಮಂಗಳೂರು ಕೆಮಿಕಲ್ ಕೋಪರೇಶನ್ ಲಿಮಿಟೆಡ್(ಎಮ್.ಸಿ.ಫ್) 1350, ಮೋಸೆಕ್ ಇಂಡಿಯನ್ ಲಿಮಿಟೆಡ್ 1350, ಗ್ರೀನ್ ಸ್ಟಾರ್ ಫರ್ಟಿಲೈಜರ್ಸ್ ಲಿಮಿಟೆಡ್ (ಜಿ.ಎಫ್.ಎಲ್) 1350, ಕೋರ್ಮಂಡಲ್ ಇಂಟರ್ ನ್ಯಾಷನಲ್ ಲಿಮಿಟೆಡ್ (ಸಿ.ಐ.ಎಲ್) 1350, ರಾಷ್ಟ್ರೀಯ ಕೆಮಿಕಲ್ ಆ್ಯಂಡ್ ಫರ್ಟಿಲೈಜರ್ಸ್ (ಆರ್.ಸಿ.ಎಫ್) 1350, ಕೃಷಿಕ ಭಾರತಿ ಕೋಪೆರೇಟಿವ್ ಲಿಮಿಟೆಡ್ (ಕ್ರಿಬ್ಕೋ) 1350, ಪ್ರದೀಪ್ ಫಾಸ್ಪೇಟ್ ಲಿಮಿಟೆಡ್ (ಪಿ.ಪಿ.ಎಲ್) 1350, ಮಹಾಧನ ಅಗ್ರೀ ಟೆಕ್ ಲಿಮಿಟೆಡ್ (ಸ್ಮಾರ್ಟಕೆಮ್ ಟೆಕ್ನಾಲಜೀಸ್ ಲಿಮಿಟೆಡ್) 1350, ನ್ಯಾಷನಲ್ ಫರ್ಟಿಲೈಜರ್ಸ್ ಲಿಮಿಟೆಡ್ (ಎನ್.ಎಫ್.ಎಲ್) 1350, ಫರ್ಟಿಲೈಜರ್ಸ್ ಕೆಮಿಕಲ್ಸ್ ಟ್ರಾವೆನಕೋರ್ ಲಿಮಿಟೆಡ್(ಫ್ಯಾಕ್ಟ್) 1350 ರೂ.ಗಳನ್ನು ನಿಗದಿ ಮಾಡಲಾಗಿದೆ.

20:20:0:13 ಕಾಂಪ್ಲೆಕ್ಸ್ ರಸಗೊಬ್ಬರ ಪ್ರತಿ 50 ಕೆ.ಜಿ ಚೀಲಕ್ಕೆ ವಿವಿಧ ಕಂಪನಿಗಳ ದರಪಟ್ಟಿ: ಫರ್ಟಿಲೈಜರ್ಸ್ ಕೆಮಿಕಲ್ಸ್ ಟ್ರಾವೆನಕೋರ್ ಲಿಮಿಟೆಡ್ (ಫ್ಯಾಕ್ಟ್) 2100, ಗುಜರಾತ್ ಸ್ಟೇಟ್ ಫರ್ಟಿಲೈಜರ್ಸ್ ಕೆಮಿಕಲ್ ಎಲ್ಟಿಡಿ (ಜಿ.ಎಸ್.ಎಫ್.ಸಿ) 2250, ಇಂಡಿಯನ್ ಪಾರ್ಮರ್ ಫರ್ಟಿಲೈಜರ್ಸ್ ಲಿಮಿಟೆಡ್ (ಇಫ್ಕೋ) 1450, ಮಂಗಳೂರು ಫರ್ಟಿಲೈಜರ್ಸ್ ಕೆಮಿಕಲ್ ಲಿಮಿಟೆಡ್ (ಎಮ್.ಸಿ.ಫ್) 2100, ಮಹಾಧನ ಅಗ್ರೀ ಟೆಕ್ ಲಿಮಿಟೆಡ್ (ಸ್ಮಾರ್ಟಕೆಮ್ ಟೆಕ್ನಾಲಜೀಸ್ ಲಿಮಿಟೆಡ್) 2100, ಗ್ರೀನ್ ಸ್ಟಾರ್ ಫರ್ಟಿಲೈಜರ್ಸ್ ಲಿಮಿಟೆಡ್ (ಜಿ.ಎಫ್.ಎಲ್) 1900, ಕೋರ್ಮಂಡಲ್ ಇಂಟರ್ ನ್ಯಾಷನಲ್ ಲಿಮಿಟೆಡ್ (ಸಿ.ಐ.ಎಲ್) 1800, ಕೃಷಿಕ ಭಾರತಿ ಕೋಪೆರೇಟಿವ್ ಲಿಮಿಟೆಡ್ (ಕ್ರಿಬ್ಕೋ) 1400, ಪ್ರದೀಪ್ ಫಾಸ್ಪೇಟ್ ಲಿಮಿಟೆಡ್ (ಪಿ.ಪಿ.ಎಲ್) 2100, ರಾಷ್ಟ್ರೀಯ ಕೆಮಿಕಲ್ ಆ್ಯಂಡ್ ಫರ್ಟಿಲೈಜರ್ಸ್ (ಆರ್.ಸಿ.ಎಫ್) 1400, ನ್ಯಾಷನಲ್ ಫರ್ಟಿಲೈಜರ್ಸ್ ಲಿಮಿಟೆಡ್ (ಎನ್.ಎಫ್.ಎಲ್) 2250ರೂ.ಗಳನ್ನು ನಿಗದಿ ಮಾಡಲಾಗಿದೆ.

ಎಮ್.ಓ.ಪಿ ರಸಗೊಬ್ಬರ ಪ್ರತಿ 50 ಕೆ.ಜಿ ಚೀಲಕ್ಕೆ ವಿವಿಧ ಕಂಪನಿಗಳ ದರಪಟ್ಟಿ: ಮೋಸೆಕ್ ಇಂಡಿಯನ್ ಲಿಮಿಟೆಡ್ 1800, ಮಂಗಳೂರು ಫರ್ಟಿಲೈಜರ್ಸ್ ಕೆಮಿಕಲ್ ಲಿಮಿಟೆಡ್ (ಎಮ್.ಸಿ.ಫ್) 2200, ಕೋರ್ಮಂಡಲ್ ಇಂಟರ್ ನ್ಯಾಷನಲ್ ಲಿಮಿಟೆಡ್ (ಸಿ.ಐ.ಎಲ್) 1800, ಗುಜರಾತ್ ಸ್ಟೇಟ್ ಫರ್ಟಿಲೈಜರ್ಸ್ ಕೆಮಿಕಲ್ ಲಿಮಿಟೆಡ್ (ಜಿ.ಎಸ್.ಎಫ್.ಸಿ) 1800, ಮಹಾಧನ ಅಗ್ರೀ ಟೆಕ್ ಲಿಮಿಟೆಡ್ (ಸ್ಮಾರ್ಟಕೆಮ್ ಟೆಕ್ನಾಲಜೀಸ್ ಲಿಮಿಟೆಡ್) 1825, ಪ್ರದೀಪ್ ಫಾಸ್ಪೇಟ್ ಲಿಮಿಟೆಡ್ (ಪಿ.ಪಿ.ಎಲ್) 2200, ಇಂಡಿಯನ್ ಪೊಟ್ಯಾಶ್ ಲಿಮಿಟೆಡ್ (ಐ.ಪಿ.ಎಲ್) 2000, ರಾಷ್ಟ್ರೀಯ ಕೆಮಿಕಲ್ ಆ್ಯಂಡ್ ಫರ್ಟಿಲೈಜರ್ಸ್ (ಆರ್.ಸಿ.ಎಫ್) 1850, ನ್ಯಾಷನಲ್ ಫರ್ಟಿಲೈಜರ್ಸ್ ಲಿಮಿಟೆಡ್ (ಎನ್.ಎಫ್.ಎಲ್): 1800, ಗ್ರೀನ್ ಸ್ಟಾರ್ ಫರ್ಟಿಲೈಜರ್ಸ್ ಲಿಮಿಟೆಡ್(ಜಿ.ಎಫ್.ಎಲ್) 1950 ರೂ.ಗಳನ್ನು ನಿಗದಿ ಮಾಡಲಾಗಿದೆ.

10:26:26 ಕಾಂಪ್ಲೆಕ್ಸ್ ರಸಗೊಬ್ಬರ ಪ್ರತಿ 50 ಕೆ.ಜಿ ಚೀಲಕ್ಕೆ ವಿವಿಧ ಕಂಪನಿಗಳ ದರಪಟ್ಟಿ: ಇಂಡಿಯನ್ ಪಾರ್ಮರ್ ಫರ್ಟಿಲೈಜರ್ಸ್ ಲಿಮಿಟೆಡ್ (ಇಫ್ಕೋ) 1950, ಮಹಾಧನ ಅಗ್ರೀ ಟೆಕ್ ಲಿಮಿಟೆಡ್ (ಸ್ಮಾರ್ಟಕೆಮ್ ಟೆಕ್ನಾಲಜೀಸ್ ಲಿಮಿಟೆಡ್) 2100, ರಾಷ್ಟ್ರೀಯ ಕೆಮಿಕಲ್ ಆ್ಯಂಡ್ ಫರ್ಟಿಲೈಜರ್ಸ್ (ಆರ್.ಸಿ.ಎಫ್) 1725, ಮಂಗಳೂರು ಫರ್ಟಿಲೈಜರ್ಸ್ ಕೆಮಿಕಲ್ ಲಿಮಿಟೆಡ್ (ಎಮ್.ಸಿ.ಫ್) 1900, ಕೋರ್ಮಂಡಲ್ ಇಂಟರ್ ನ್ಯಾಷನಲ್ ಲಿಮಿಟೆಡ್ (ಸಿ.ಐ.ಎಲ್) 2250, ಕೃಷಿಕ ಭಾರತಿ ಕೋಪೆರೇಟಿವ್ ಲಿಮಿಟೆಡ್(ಕ್ರಿಬ್ಕೋ) 1900, ಪ್ರದೀಪ್ ಫಾಸ್ಪೇಟ್ ಲಿಮಿಟೆಡ್ (ಪಿ.ಪಿ.ಎಲ್) 2450, ಗ್ರೀನ್ ಸ್ಟಾರ್ ಫರ್ಟಿಲೈಜರ್ಸ್ ಲಿಮಿಟೆಡ್ (ಜಿ.ಎಫ್.ಎಲ್) 2250, ಗುಜರಾತ್ ಸ್ಟೇಟ್ ಫರ್ಟಿಲೈಜರ್ಸ್ ಕೆಮಿಕಲ್ ಲಿಮಿಟೆಡ್ (ಜಿ.ಎಸ್.ಎಫ್.ಸಿ) 2150ರೂ.ಗಳನ್ನು ನಿಗದಿ ಮಾಡಲಾಗಿದೆ.

ಯೂರಿಯಾ ರಸಗೊಬ್ಬರ ಎಲ್ಲಾ ಕಂಪನಿಯ ಪ್ರತಿ 45 ಕೆ.ಜಿ ಚೀಲಕ್ಕೆ 266.5 ರೂ ಗಳಿದ್ದು, ಅವುಗಳು: ರಾಷ್ಟ್ರೀಯ ಕೆಮಿಕಲ್ ಆ್ಯಂಡ್ ಫರ್ಟಿಲೈಜರ್ಸ್ (ಆರ್.ಸಿ.ಎಫ್), ಮಂಗಳೂರು ಕೆಮಿಕಲ್ ಕೋಪರೇಶನ್ ಲಿಮಿಟೆಡ್ (ಎಮ್.ಸಿ.ಫ್), ಇಂಡಿಯನ್ ಫಾರ್ಮರ್ ಫರ್ಟಿಲೈಜರ್ಸ್ ಲಿಮಿಟೆಡ್ (ಇಫ್ಕೋ), ಪ್ರದೀಪ್ ಫಾಸ್ಪೇಟ್ ಲಿಮಿಟೆಡ್(ಪಿ.ಪಿ.ಎಲ್), ಗುಜರಾತ್ ಸ್ಟೇಟ್ ಫರ್ಟಿಲೈಜರ್ಸ್ ಕೆಮಿಕಲ್ ಲಿಮಿಟೆಡ್ (ಜಿ.ಎಸ್.ಎಫ್.ಸಿ), ಮದ್ರಾಸ ಫರ್ಟಿಲೈಜರ್ಸ್ ಲಿಮಿಟೆಡ್ (ಎಮ್.ಎಫ್.ಎಲ್), ಸೌಥರ್ನ್ ಪೆಟ್ರೋಕೆಮಿಕಲ್ಸ್ ಇಂಡಸ್ಟ್ರೀಯಸ್ ಕೋಪರೇಷನ್ (ಸ್ಪಿಕ್), ಕೃಷಿಕ ಭಾರತಿ ಕೋಪೆರೇಟಿವ್ ಲಿಮಿಟೆಡ್(ಕ್ರಿಬ್ಕೋ), ಕೋರ್ಮಂಡಲ್ ಇಂಟರ್ ನ್ಯಾಷನಲ್ ಲಿಮಿಟೆಡ್ (ಸಿ.ಐ.ಎಲ್), ನಾಗಾರ್ಜುನ್ ಫರ್ಟಿಲೈಜರ್ಸ್ ಕೆಮಿಕಲ್ಸ್ ಲಿಮಿಟೆಡ್ (ಎನ್.ಎಫ್.ಸಿ.ಎಲ್), ಇಂಡಿಯಾ ಪೊಟ್ಯಾಷ್ ಲಿಮಿಟೆಡ್ (ಐ.ಪಿ.ಎಲ್), ನ್ಯಾಷನಲ್ ಫರ್ಟಿಲೈಜರ್ಸ್ ಲಿಮಿಟೆಡ್(ಎನ್.ಎಫ್.ಎಲ್) ನಲ್ಲಿ ಲಭ್ಯವಿದೆ.

16:20:0:13 ಕಾಂಪ್ಲೆಕ್ಸ್ ರಸಗೊಬ್ಬರ ಪ್ರತಿ 50 ಕೆ.ಜಿ ಚೀಲಕ್ಕೆ ವಿವಿಧ ಕಂಪನಿಗಳ ದರ: ಕೋರ್ಮಂಡಲ್ ಇಂಟರ್ ನ್ಯಾಷನಲ್ ಲಿಮಿಟೆಡ್ (ಸಿ.ಐ.ಎಲ್) 1750, ಮಹಾಧನ ಅಗ್ರೀ ಟೆಕ್ ಲಿಮಿಟೆಡ್ (ಸ್ಮಾರ್ಟಕೆಮ್ ಟೆಕ್ನಾಲಜೀಸ್ ಲಿಮಿಟೆಡ್) 1200, ಗ್ರೀನ್ ಸ್ಟಾರ್ ಫರ್ಟಿಲೈಜರ್ಸ್ ಲಿಮಿಟೆಡ್ (ಜಿ.ಎಫ್.ಎಲ್) 1400ರೂ.ಗಳನ್ನು ನಿಗದಿ ಮಾಡಲಾಗಿದೆ.

14:35:14 ಕಾಂಪ್ಲೆಕ್ಸ್ ರಸಗೊಬ್ಬರ ಪ್ರತಿ 50 ಕೆ.ಜಿ ಚೀಲಕ್ಕೆ ವಿವಿಧ ಕಂಪನಿಗಳ ದರ: ಕೋರ್ಮಂಡಲ್ ಇಂಟರ್ ನ್ಯಾಷನಲ್ ಲಿಮಿಟೆಡ್ (ಸಿ.ಐ.ಎಲ್) 1800ರೂ.ಗಳನ್ನು ನಿಗದಿ ಮಾಡಲಾಗಿದೆ.

14:35:15-ಝುಡ್‌ಎನ್ ಕಾಂಪ್ಲೆಕ್ಸ್ ರಸಗೊಬ್ಬರ ಪ್ರತಿ 50 ಕೆ.ಜಿ ಚೀಲಕ್ಕೆ ಕೋರ್ಮಂಡಲ್ ಇಂಟರ್ ನ್ಯಾಷನಲ್ ಲಿಮಿಟೆಡ್(ಸಿ.ಐ.ಎಲ್) 1700 ರೂ.ಗಳನ್ನು ನಿಗದಿ ಮಾಡಲಾಗಿದೆ.

14:35:14 ಕಾಂಪ್ಲೆಕ್ಸ್ ರಸಗೊಬ್ಬರ ಪ್ರತಿ 50 ಕೆ.ಜಿ ಚೀಲಕ್ಕೆ ಪ್ರದೀಪ್ ಫಾಸ್ಪೇಟ್ ಲಿಮಿಟೆಡ್(ಪಿ.ಪಿ.ಎಲ್):, 2400ರೂ., 12:32:16 ಕಾಂಪ್ಲೆಕ್ಸ್ ರಸಗೊಬ್ಬರ ಪ್ರತಿ 50 ಕೆ.ಜಿ ಚೀಲಕ್ಕೆ ಕೋರ್ಮಂಡಲ್ ಇಂಟರ್ ನ್ಯಾಷನಲ್ ಲಿಮಿಟೆಡ್(ಸಿ.ಐ.ಎಲ್) 1850, ಮಹಾಧನ ಅಗ್ರೀ ಟೆಕ್ ಲಿಮಿಟೆಡ್ (ಸ್ಮಾರ್ಟಕೆಮ್ ಟೆಕ್ನಾಲಜೀಸ್ ಲಿಮಿಟೆಡ್) 1900, ಪ್ರದೀಪ್ ಫಾಸ್ಪೇಟ್ ಲಿಮಿಟೆಡ್ (ಪಿ.ಪಿ.ಎಲ್) 2450ರೂ., 28:28:0:13 ಕಾಂಪ್ಲೆಕ್ಸ್ ರಸಗೊಬ್ಬರ ಪ್ರತಿ 50 ಕೆ.ಜಿ ಚೀಲಕ್ಕೆ ಕೋರ್ಮಂಡಲ್ ಇಂಟರ್ ನ್ಯಾಷನಲ್ ಲಿಮಿಟೆಡ್ (ಸಿ.ಐ.ಎಲ್) 1500, ಪ್ರದೀಪ್ ಫಾಸ್ಪೇಟ್ ಲಿಮಿಟೆಡ್ (ಪಿ.ಪಿ.ಎಲ್) 1800, ಇಂಡಿಯನ್ ಪಾರ್ಮರ್ ಫರ್ಟಿಲೈಜರ್ಸ್ ಲಿಮಿಟೆಡ್ (ಇಫ್ಕೋ) 1750ರೂ.ಗಳನ್ನು ನಿಗದಿ ಮಾಡಲಾಗಿದೆ.

ಅಮೋನಿಯಂ ಸಲ್ಫೇಟ್ ರಸಗೊಬ್ಬರ ಪ್ರತಿ 50 ಕೆ.ಜಿ ಚೀಲಕ್ಕೆ ಫರ್ಟಿಲೈಜರ್ಸ್ ಕೆಮಿಕಲ್ಸ್ ಟ್ರಾವೆನಕೋರ್ ಲಿಮಿಟೆಡ್(ಫ್ಯಾಕ್ಟ್) 1400, ಗುಜರಾತ್ ಸ್ಟೇಟ್ ಫರ್ಟಿಲೈಜರ್ಸ್ ಕೆಮಿಕಲ್ ಲಿಮಿಟೆಡ್ (ಜಿ.ಎಸ್.ಎಫ್.ಸಿ) 1400, ಮಹಾಧನ ಅಗ್ರೀ ಟೆಕ್ ಲಿಮಿಟೆಡ್ (ಸ್ಮಾರ್ಟಕೆಮ್ ಟೆಕ್ನಾಲಜೀಸ್ ಲಿಮಿಟೆಡ್) 1500, ಪ್ರದೀಪ್ ಫಾಸ್ಪೇಟ್ ಲಿಮಿಟೆಡ್ (ಪಿ.ಪಿ.ಎಲ್) 1400, ಕೃಷಿಕ ಭಾರತಿ ಕೋಪೆರೇಟಿವ್ ಲಿಮಿಟೆಡ್(ಕ್ರಿಬ್ಕೋ) 1400ರೂ.ಗಳನ್ನು ನಿಗದಿ ಮಾಡಲಾಗಿದೆ.

15:15:15 ಕಾಂಪ್ಲೆಕ್ಸ್ ರಸಗೊಬ್ಬರ ಪ್ರತಿ 50 ಕೆ.ಜಿ ಚೀಲಕ್ಕೆ ಫರ್ಟಿಲೈಜರ್ಸ್ ಕೆಮಿಕಲ್ಸ್ ಟ್ರಾವೆನಕೋರ್ ಲಿಮಿಟೆಡ್(ಫ್ಯಾಕ್ಟ್) 2025, ಇಂಡಿಯನ್ ಪಾರ್ಮರ್ ಫರ್ಟಿಲೈಜರ್ಸ್ ಲಿಮಿಟೆಡ್ (ಇಫ್ಕೋ) 1650, ಪ್ರದೀಪ್ ಫಾಸ್ಪೇಟ್ ಲಿಮಿಟೆಡ್(ಪಿ.ಪಿ.ಎಲ್) 1975ರೂ., 15:15:15 (ಐ.ಎಮ್.ಪಿ) ಕಾಂಪ್ಲೆಕ್ಸ್ ರಸಗೊಬ್ಬರ ಪ್ರತಿ 50 ಕೆ.ಜಿ ಚೀಲಕ್ಕೆ ಫರ್ಟಿಲೈಜರ್ಸ್ ಕೆಮಿಕಲ್ಸ್ ಟ್ರಾವೆನಕೋರ್ ಲಿಮಿಟೆಡ್(ಫ್ಯಾಕ್ಟ್) 1650, ಇಂಡಿಯನ್ ಪಾರ್ಮರ್ ಫರ್ಟಿಲೈಜರ್ಸ್ ಲಿಮಿಟೆಡ್ (ಇಫ್ಕೋ) 1470ರೂ.ಗಳನ್ನು ನಿಗದಿ ಮಾಡಲಾಗಿದೆ.

15:15:15:09 ಕಾಂಪ್ಲೆಕ್ಸ್ ರಸಗೊಬ್ಬರ ಪ್ರತಿ 50 ಕೆ.ಜಿ ಚೀಲಕ್ಕೆ ಪ್ರದೀಪ್ ಫಾಸ್ಪೇಟ್ ಲಿಮಿಟೆಡ್ (ಪಿ.ಪಿ.ಎಲ್) 1950 , ಕೋರ್ಮಂಡಲ್ ಇಂಟರ್ ನ್ಯಾಷನಲ್ ಲಿಮಿಟೆಡ್ (ಸಿ.ಐ.ಎಲ್) 1650 ರೂ., 19:19:19 ಕಾಂಪ್ಲೆಕ್ಸ್ ರಸಗೊಬ್ಬರ ಪ್ರತಿ 50 ಕೆ.ಜಿ ಚೀಲಕ್ಕೆ ಪ್ರದೀಪ್ ಫಾಸ್ಪೇಟ್ ಲಿಮಿಟೆಡ್ (ಪಿ.ಪಿ.ಎಲ್) 2500ರೂ., ಸಿಂಗಲ್ ಸೂಪರ್ ಫಾಸ್ಪೇಟ್ (ಎಸ.ಎಸ.ಪಿ)(ಪೌಡ)ರ್ ರಸಗೊಬ್ಬರ ಪ್ರತಿ 50 ಕೆ.ಜಿ ಚೀಲಕ್ಕೆ ಕೋರ್ಮಂಡಲ್ ಇಂಟರ್ ನ್ಯಾಷನಲ್ ಲಿಮಿಟೆಡ್ (ಸಿ.ಐ.ಎಲ್) 565, ಗ್ರೀನ್ ಸ್ಟಾರ್ ಫರ್ಟಿಲೈಜರ್ಸ್ ಲಿಮಿಟೆಡ್ (ಜಿ.ಎಫ್.ಎಲ್) 640, ಕೋಯಂಬತ್ತುರ್ ಪ್ಯೊನರ್ ಫರ್ಟಿಲೈಜರ್ಸ್ ಪ್ರೈ.ಲಿಮಿಟೆಡ್ 650ರೂ.ಗಳನ್ನು ನಿಗದಿ ಮಾಡಲಾಗಿದೆ.

ಸಿಂಗಲ್ ಸೂಪರ್ ಫಾಸ್ಪೇಟ್ (ಎಸ.ಎಸ.ಪಿ) (ಗ್ರಾನುಲ)ರ್ ರಸಗೊಬ್ಬರ ಪ್ರತಿ 50 ಕೆ.ಜಿ ಚೀಲಕ್ಕೆ ಕೋರ್ಮಂಡಲ್ ಇಂಟರ್ ನ್ಯಾಷನಲ್ ಲಿಮಿಟೆಡ್(ಸಿ.ಐ.ಎಲ್) 565, ಗ್ರೀನ್ ಸ್ಟಾರ್ ಫರ್ಟಿಲೈಜರ್ಸ್ ಲಿಮಿಟೆಡ್(ಜಿ.ಎಫ್.ಎಲ್) 700ರೂ., 24:24:0 ಕಾಂಪ್ಲೆಕ್ಸ್ ರಸಗೊಬ್ಬರ ಪ್ರತಿ 50 ಕೆ.ಜಿ ಚೀಲಕ್ಕೆ ಮಹಾಧನ ಅಗ್ರೀ ಟೆಕ್ ಲಿಮಿಟೆಡ್ (ಸ್ಮಾರ್ಟಕೆಮ್ ಟೆಕ್ನಾಲಜೀಸ್ ಲಿಮಿಟೆಡ್) 2500, ಪ್ರದೀಪ್ ಫಾಸ್ಪೇಟ್ ಲಿಮಿಟೆಡ್ (ಪಿ.ಪಿ.ಎಲ್) 1650, ಕೋರ್ಮಂಡಲ್ ಇಂಟರ್ ನ್ಯಾಷನಲ್ ಲಿಮಿಟೆಡ್ (ಸಿ.ಐ.ಎಲ್) 1500ರೂ., 14:28:0 ಕಾಂಪ್ಲೆಕ್ಸ್ ರಸಗೊಬ್ಬರ ಪ್ರತಿ 50 ಕೆ.ಜಿ ಚೀಲಕ್ಕೆ ಪ್ರದೀಪ್ ಫಾಸ್ಪೇಟ್ ಲಿಮಿಟೆಡ್(ಪಿ.ಪಿ.ಎಲ್) 1700ರೂ., 24:24:0:08 ಕಾಂಪ್ಲೆಕ್ಸ್ ರಸಗೊಬ್ಬರ ಪ್ರತಿ 50 ಕೆ.ಜಿ ಚೀಲಕ್ಕೆ ಕೋರ್ಮಂಡಲ್ ಇಂಟರ್ ನ್ಯಾಷನಲ್ ಲಿಮಿಟೆಡ್ (ಸಿ.ಐ.ಎಲ್) 1700ರೂ., 16:16:16 ಕಾಂಪ್ಲೆಕ್ಸ್ ರಸಗೊಬ್ಬರ ಪ್ರತಿ 50 ಕೆ.ಜಿ ಚೀಲಕ್ಕೆ ಇಂಡಿಯನ್ ಪೊಟ್ಯಾಷ್ ಲಿಮಿಟೆಡ್ (ಐ.ಪಿ.ಎಲ್) 2250ರೂ.ಗಳನ್ನು ನಿಗದಿ ಮಾಡಲಾಗಿದೆ.

ಎನ್:ಪಿ 20:20:0 ರಸಗೊಬ್ಬರ ಪ್ರತಿ 50 ಕೆ.ಜಿ ಚೀಲಕ್ಕೆ ಕೋರ್ಮಂಡಲ್ ಇಂಟರ್ ನ್ಯಾಷನಲ್ ಲಿಮಿಟೆಡ್ (ಸಿ.ಐ.ಎಲ್) 1400ರೂ., ಎನ್.ಪಿ.ಕೆ 14:28:14 ಕಾಂಪ್ಲೆಕ್ಸ್ ರಸಗೊಬ್ಬರ ಪ್ರತಿ 50 ಕೆ.ಜಿ ಚೀಲಕ್ಕೆ ಪ್ರದೀಪ್ ಫಾಸ್ಪೇಟ್ ಲಿಮಿಟೆಡ್ (ಪಿ.ಪಿ.ಎಲ್) 1795ರೂ.ಗಳನ್ನು ನಿಗದಿ ಮಾಡಲಾಗಿದೆ.

ಎನ್.ಪಿ.ಕೆ 17:17:17 ರಸಗೊಬ್ಬರ ಪ್ರತಿ 50 ಕೆ.ಜಿ ಚೀಲಕ್ಕೆ ಗ್ರೀನ್ ಸ್ಟಾರ್ ಫರ್ಟಿಲೈಜರ್ಸ್ ಲಿಮಿಟೆಡ್(ಜಿ.ಎಫ್.ಎಲ್) 1750ರೂ., ಎಮ್,ಎಸ್,ಝುನ್ ಬಿ (ಫಾರ್ಟಿಫೈಡ್) ಎನ್.ಪಿ.ಕೆ ಕಾಂಪ್ಲೇಕ್ಸ್ 8:21:21 (40 ಕೆ/ಜಿ), ಮಹಾಧನ ಅಗ್ರೀ ಟೆಕ್ ಲಿಮಿಟೆಡ್(ಸ್ಮಾರ್ಟಕೆಮ್ ಟೆಕ್ನಾಲಜೀಸ್ ಲಿಮಿಟೆಡ್) 2300ರೂ., ಎನ್.ಪಿ.ಕೆ 11:30:14 ಫಾರ್ಟಿಫೈಡ್ ಮತ್ತು ಎಮ್,ಎಸ್,ಝುನ್ ಬಿ (40ಕೆಜಿ) ವಿವಿಧ ಕಂಪನಿಗಳ: ಮಹಾಧನ ಅಗ್ರೀ ಟೆಕ್ ಲಿಮಿಟೆಡ್(ಸ್ಮಾರ್ಟಕೆಮ್ ಟೆಕ್ನಾಲಜೀಸ್ ಲಿಮಿಟೆಡ್) 2300ರೂ.ಗಳನ್ನು ನಿಗದಿ ಮಾಡಲಾಗಿದೆ.

ಎನ್.ಪಿ.ಕೆ 9:24:24 ಫಾರ್ಟಿಫೈಡ್ ಮತ್ತು ಎಮ್,ಎಸ್,ಝುನ್ ಬಿ (40ಕೆಜಿ) ಮಹಾಧನ ಅಗ್ರೀ ಟೆಕ್ ಲಿಮಿಟೆಡ್ (ಸ್ಮಾರ್ಟಕೆಮ್ ಟೆಕ್ನಾಲಜೀಸ್ ಲಿಮಿಟೆಡ್) 2400, ಗುಜರಾತ್ ಸ್ಟೇಟ್ ಫರ್ಟಿಲೈಜರ್ಸ್ ಕೆಮಿಕಲ್ ಲಿಮಿಟೆಡ್ (ಜಿ.ಎಸ್.ಎಫ್.ಸಿ) 1950ರೂ.ಗಳನ್ನು ಎಮ್.ಎ.ಪಿ ರಸಗೊಬ್ಬರ ಪ್ರತಿ 50 ಕೆ.ಜಿ ಚೀಲಕ್ಕೆ ಕೃಷಿಕ ಭಾರತಿ ಕೋಪೆರೇಟಿವ್ ಲಿಮಿಟೆಡ್ (ಕ್ರಿಬ್ಕೋ) 1470ರೂ., ಟಿ.ಎಸ್.ಪಿ ರಸಗೊಬ್ಬರ ಪ್ರತಿ 50 ಕೆ.ಜಿ ಚೀಲಕ್ಕೆ ಪ್ರದೀಪ್ ಫಾಸ್ಪೇಟ್ ಲಿಮಿಟೆಡ್(ಪಿ.ಪಿ.ಎಲ್) 1300, ಫರ್ಟಿಲೈಜರ್ಸ್ ಕೆಮಿಕಲ್ಸ್ ಟ್ರಾವೆನಕೋರ್ ಲಿಮಿಟೆಡ್ (ಫ್ಯಾಕ್ಟ್) 1300ರೂ.ಗಳನ್ನು ನಿಗದಿ ಮಾಡಲಾಗಿದೆ ಎಂದು ಕೃಷಿ ಇಲಾಖೆಯ ಜಂಟಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.'

ಬಳ್ಳಾರಿ: ಜೂ.19 ರಂದು ಪಿಎಂ-ವಿಬಿಆರ್‌ವೈ ಸಾರ್ವಜನಿಕ ಸಂಪರ್ಕ ಕಾರ್ಯಕ್ರಮ

ಬಳ್ಳಾರಿ,ಜೂ.17(ಕರ್ನಾಟಕ ವಾರ್ತೆ):

ಉದ್ಯೋಗ ಸೃಷ್ಟಿಯನ್ನು ಉತ್ತೇಜಿಸುವ ಮತ್ತು ಸಾಮಾಜಿಕ ಭದ್ರತೆಯ ವ್ಯಾಪ್ತಿಯನ್ನು ವಿಸ್ತರಿಸುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರ ಜಾರಿಗೆ ತಂದಿರುವ 'ಪ್ರಧಾನ್ ಮಂತ್ರಿ ವಿಕಸಿತ್ ಭಾರತ್ ರೋಜ್‌ಗಾರ್ ಯೋಜನೆ' ಅಡಿ ಬೃಹತ್ ಸಾರ್ವಜನಿಕ ಸಂಪರ್ಕ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಕಾರ್ಮಿಕ ಮತ್ತು ಉದ್ಯೋಗ ಸಚಿವಾಲಯದ ಮಾರ್ಗದರ್ಶನದಲ್ಲಿ, ಉದ್ಯೋಗಿಗಳ ಭವಿಷ್ಯ ನಿಧಿ ಸಂಸ್ಥೆ ಬಳ್ಳಾರಿ ಪ್ರಾದೇಶಿಕ ಕಚೇರಿಯು ಜೂನ್ 19 ರಂದು ಸಂಜೆ 04 ಗಂಟೆಗೆ ತೋರಣಗಲ್ಲು ವಿದ್ಯಾನಗರದ ಜೆಎಸ್‌ಡಬ್ಲ್ಯೂ ಟೌನ್‌ಶಿಪ್‌ನಲ್ಲಿರುವ 'ಜೆಮ್ಯಾಕ್ಸ್ ' ಸಭಾಂಗಣದಲ್ಲಿ ಈ ಕಾರ್ಯಕ್ರಮವನ್ನು ಆಯೋಜಿಸಿದೆ.

★ಪ್ರಧಾನಮಂತ್ರಿ ಮೋದಿಯವರಿಂದ ರೂ.2,400 ಕೋಟಿ ಪ್ರೋತ್ಸಾ ಹಧನ ವಿತರಣೆ:★

ಇದೇ ಜೂನ್ 19ರಂದು ಸಂಜೆ 05 ಗಂಟೆಗೆ ನವದೆಹಲಿಯ ವಿಜ್ಞಾನ ಭವನದಲ್ಲಿ ನಡೆಯಲಿರುವ ವಿಶೇಷ ಕಾರ್ಯಕ್ರಮದಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಯೋಜನೆಯ ಫಲಾನುಭವಿಗಳಿಗೆ ಸುಮಾರು 2,400 ಕೋಟಿ ರೂಪಾಯಿಗಳ ಪ್ರೋತ್ಸಾ ಹಧನವನ್ನು ನೇರವಾಗಿ ವಿತರಿಸಲಿದ್ದಾರೆ.

ಇದರ ಅಂಗವಾಗಿ ತೋರಣಗಲ್ಲಿನಲ್ಲಿ ಈ ವಿಶೇಷ ಸಂಪರ್ಕ ಕಾರ್ಯಕ್ರಮ ಆಯೋಜಿಸಲಾಗಿದ್ದು, ಈ ಕಾರ್ಯಕ್ರಮದಲ್ಲಿ ಉದ್ಯೋಗದಾತರು, ಉದ್ಯೋಗಿಗಳು, ಪಿಎಂ-ವಿಬಿಆರ್‌ವೈ ಫಲಾನುಭವಿಗಳು, ಉದ್ಯಮ ರಂಗದ ಪ್ರತಿನಿಧಿಗಳು ಹಾಗೂ ಸರ್ಕಾರಿ ಅಧಿಕಾರಿಗಳು ಭಾಗವಹಿಸಲಿದ್ದಾರೆ ಎಂದು ಬಳ್ಳಾರಿ ಪ್ರಾದೇಶಿಕ ಭವಿಷ್ಯ ನಿಧಿ ಕಚೇರಿಯ ಆಯುಕ್ತ ಕೆ.ವಿ. ಪ್ರವೀಣ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರೈತರ ಬೆವರಿನ ಹಣ ವ್ಯವಸ್ಥಿತ ಲೂಟಿ



ಹೊಸಪೇಟೆ,ಜೂ.18-

ರಸಗೊಬ್ಬರ ಮಾರಾಟ, ಪೂರೈಕೆಯಲ್ಲಿ ನಂತರವಾಗಿ ಅವ್ಯವಹಾರವಾಗುತ್ತಿದ್ದು ರೈತರ ಬೆವರಿನ ಹಣವನ್ನು ಮಾರಾಟಗಾರರು, ಪೂರೈಕೆದಾರರು, ಅಧಿಕಾರಿಗಳು ಸೇರಿದಂತೆ ರಾಜಕಾರಣಿಗಳು ವ್ಯವಸ್ಥಿತವಾಗಿ ಲೂಟಿ ಮಾಡುತ್ತಿದ್ದಾರೆ ಎಂದು ಕೆಆರ್‌ಎಸ್ ಪಕ್ಷ ಆರೋಪಿಸಿದೆ.

ಈ ಕುರಿತು ಹೊಸಪೇಟೆಯ ಪತ್ರಿಕಾಭವನದಲ್ಲಿ ಸುದ್ದಿಗೋಷ್ಠಿಯನ್ನು ನಡೆಸಿ ಮಾತನಾಡಿದ ಕೆಆರ್‌ಎಸ್ ಪಕ್ಷದ ಜಿಲ್ಲಾ ಘಟಕದ ಅಧ್ಯಕ್ಷ ಸುಭಾನ ಹುಗಲೂರು ಪ್ರತಿವರ್ಷವೂ ರಸಗೊಬ್ಬರ ಮಾರಾಟದಲ್ಲಿ ರಾಜ್ಯ ಒಂದರಿಂದಲೇ 2ಸಾವಿರ ಕೋಟಿಯಷ್ಟು ಹಣವನ್ನು ವ್ಯವಸ್ಥಿತವಾಗಿ ಲೂಟಿ ಮಾಡಲಾಗುತ್ತಿದೆ. ಕೃತಕ ಅಭಾವವನ್ನು ಸೃಷ್ಟಿಸುವ ಮೂಲಕ ಕನಿಷ್ಠ ದರಕ್ಕಿಂತ ಹೆಚ್ಚುಹಣಕ್ಕೆ ಮಾರಾಟವಾಗಲು ಸಹಕಾರ ನೀಡುವ ಮೂಲಕ ಈ ಜಾಲಕ್ಕೆ ಅಧಿಕಾರಿಗಳು ಹಾಗೂ ರಾಜಕಾರಣಿಗಳು ಕುಮ್ಮಕ್ಕು ನೀಡುತ್ತಿದ್ದಾರೆ ಎಂದು ಆರೋಪಿಸಿದರು.

ಕೇಂದ ರಸಗೊಬ್ಬರ ಖಾತೆಯ ಸಚಿವರು ಲೋಕಸಭೆಯಲ್ಲಿ ಪ್ರತಿ ರಾಜ್ಯವಾರು ಅಗತ್ಯತೆ ಹಾಗೂ ಬೇಡಿಕೆ ಹಾಗೂ ನಮ್ಮ ಗೋದಾಮುಗಳಲ್ಲಿ ಸಂಗ್ರಹವಿರುವ ರಸಗೊಬ್ಬರ ಮಾಹಿತಿ ನೀಡಿದರು ಅದೇ ಸಮಯದಲ್ಲಿ ಕೃತಕ ಅಭಾವವನ್ನು ಸೃಷ್ಟಿಸಿ ವ್ಯವಹಾರ ಮಾಡುತ್ತಿದ್ದು ಅದನ್ನು ತಡೆಯಬೇಕಾದ ಅಧಿಕಾರಿಗಳು ಕ್ರಮ ಕೈಗೊಳ್ಳುವ ಬದಲು ಪ್ರೋತ್ಸಾಹಿಸುವ ಮಾತನಾಡುತ್ತಿರುವುದು ಅವ್ಯವಹಾರದಲ್ಲಿ ತಾವು ಪಾಲುದಾರರಾಗಿರುವುದುದಕ್ಕೆ ಸಾಕ್ಷಿಯಾಗಿದೆ ಎಂದು ಜಾಲವನ್ನು ತೆರೆದಿಟ್ಟರು. ಚಿಲ್ಲರೆ ಮಾರಾಟದಲ್ಲಿಯು ಶೇಕಡಾ 25-30 ಪ್ರತಿಶತ ದರ ಹೆಚ್ಚಳ ರಾಜ್ಯದ ಒಟ್ಟು ಬೇಡಿಕೆಗೆ ಹೋಲಿಸಿದರೆ ಅಂದಾಜು 2ಸಾವಿರ ಕೋಟಿ ದಾಟುತ್ತದೆ ಎಂದರು.

ಮತ್ತೊಂದಡೆ ಲಿಂಕ್ ಪ್ರೋಡಕ್ಟ್‌ಗಳನ್ನು ಕಡ್ಡಾಯವಾಗಿ ಖರೀದಿ ಮಾಡಲು ಒತ್ತಡ ಹೇರಿ ಪ್ರತಿ ರೈತರಿಗೂ ಅಂದಾಜು 500 ರೂಪಾಯಿಗಳ ಹೆಚ್ಚುವರಿ ಖರೀದಿಗೂ ಅವಕಾಶ ನೀಡುವ ಮೂಲಕ ಮತ್ತೊಂದು ರೀತಿಯಲ್ಲಿ ಸುಲಿಗೆ ಮಾಡಿದರು ಅಧಿಕಾರಿಗಳು ಕಣ್ಣುಮುಚ್ಚಿ ಕುಳಿತಿದ್ದಾರೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಜಿಲ್ಲಾ ಉಪಾಧ್ಯಕ್ಷ ಚನ್ನವೀರ ಚಿತ್ತಾರ, ಪ್ರಧಾನ ಕಾರ್ಯದರ್ಶಿ ವರುಣ್ ತೋರಣಗಟ್ಟಿ, ಹರಕುಸಿ ಗಣೇಶ್, ವೀರೇಂದ್ರ, ಎಚ್ ಲೋಕೇಶ ಸೇರಿದಂತೆ ಕಾರ್ಯಕರ್ತರು ಹಾಜರಿದ್ದರು.

Printed and Published by: SUNDAR and Owned by: SUNDAR Printed at: SHILPA PUBLICATIONS AND PRINTING PRESS, No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Published at: No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Editor: SUNDAR